# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 19, 2021

ಸಂಪುಟ : 48 ಸಂಚಿಕೆ : 97 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




# ಎಸ್ಸಿ ಸಚಿವರ ಪರಿಚಯಕ್ಕೆ ಕಾಂಗ್ರೆಸ್ ಅಡ್ಡಿ

## ಜನಾಶೀರ್ವಾದ ಯಾತ್ರೆಯಲ್ಲಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ

ದಾವಣಗೆರೆ, ಆ. 18 - ಹಿಂದುಳಿದ ವರ್ಗದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪರಿಶಿಷ್ಟ ಜಾತಿ ಹಾಗೂ ಪಂಗಡದ 20 ಜನರನ್ನು ಸಚಿವರನ್ನಾಗಿ ಮಾಡಿದರೆ, ಅವರನ್ನು ಸಂಸತ್ತಿಗೆ ಪರಿಚಯಿಸಲು ಕಾಂಗ್ರೆಸ್ ಅಡ್ಡಿಪಡಿಸಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ. ನಾರಾಯಣಸ್ವಾಮಿ ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಲಾಗಿದ್ದ ಜನಾಶೀರ್ವಾದ ಯಾತ್ರೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಬಿಜೆಪಿಯನ್ನು ಬ್ರಾಹ್ಮಣರ ಪಕ್ಷ ಹಾಗೂ ಗರ್ಭಗುಡಿ ರಾಜಕೀಯ ಮಾಡುವ ಪಕ್ಷ ಎಂದು ಕಾಂಗ್ರೆಸ್ ಲೇವಡಿ ಮಾಡುತ್ತಿತ್ತು. ಆದರೆ, ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದ 20 ಜನರನ್ನು ಬಿಜೆಪಿ ಕೇಂದ್ರ ಸಚಿವರನ್ನಾಗಿ ಮಾಡಿದೆ ಎಂದು ಹೇಳಿದರು.

ಚುನಾವಣೆಗೆ ಮುಂಚೆಯೇ ಹಿಂದುಳಿದ ವರ್ಗಕ್ಕೆ ಸೇರಿದ ಮೋದಿ ಅವರನ್ನು ಪ್ರಧಾನ ಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಲಾಗಿತ್ತು. ಬಿಜೆಪಿ ಮೂರನೇ ಎರಡರಷ್ಟು ಬಹುಮತದಿಂದ ಗೆಲುವು ಸಾಧಿಸಿದೆ. ಈ ಬಾರಿ ಸಂಪುಟದಲ್ಲಿ 23 ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಸಚಿವರಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೇ ಹಿಂದುಳಿದ ವರ್ಗಕ್ಕೆ ಸೇರಿದವರು ಎಂದರು.

ಪರಿಶಿಷ್ಟ ಜಾತಿ - ಪಂಗಡ ಹಾಗೂ ಹಿಂದುಳಿದ ವರ್ಗಗಳವರ ಸಚಿವರನ್ನು ಸಂಸತ್ತಿಗೆ (2ನೇ ಪುಟಕ್ಕೆ)

**ಬ್ರಾಹ್ಮಣರ ಪಕ್ಷ ಎಂದು ಕಾಂಗ್ರೆಸ್ ಲೇವಡಿ ಮಾಡುತ್ತಿದ್ದ ಬಿಜೆಪಿಯಿಂದ ಹಿಂದುಳಿದ ವರ್ಗದ ಪ್ರಧಾನ ಮಂತ್ರಿ, 20 ಪರಿಶಿಷ್ಟ ಜಾತಿ - ಪಂಗಡದ ಸಚಿವರು ಹಾಗೂ 23 ಇತರೆ ಹಿಂದುಳಿದ ವರ್ಗದ ಸಚಿವರಿದ್ದಾರೆ.**

**- ಎ.ನಾರಾಯಣಸ್ವಾಮಿ, ಕೇಂದ್ರ ಸಾಮಾಜಿಕ ನ್ಯಾಯ ಸಚಿವ**

## ತುಮಕೂರಿಗೆ ನೇರ ರೈಲು, ಸಿ.ಆರ್.ಸಿ. ಸೌಲಭ್ಯಕ್ಕೆ ಕ್ರಮ

ದಾವಣಗೆರೆ, ಆ. 18 - ದಾವಣಗೆರೆ - ತುಮಕೂರು ನೇರ ರೈಲು ಸಂಪರ್ಕ ಯೋಜನೆಯನ್ನು ಜಾರಿಗೆ ತರುವ ಜೊತೆಗೆ ನಗರದಲ್ಲಿರುವ ಸಿ.ಆರ್.ಸಿ. ಕೇಂದ್ರ ಸ್ವಂತ ಕಟ್ಟಡ ಹೊಂದುವ ಜೊತೆಗೆ ಅಗತ್ಯ ಸೌಲಭ್ಯಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ದಾವಣಗೆರೆ - ಚಿತ್ರದುರ್ಗ - ತುಮಕೂರು ನೇರ ರೈಲ್ವೆ ಯೋಜನೆಗೆ ಕೇಂದ್ರ ರೈಲ್ವೆ ಇಲಾಖೆಯಿಂದ 1,901 ಕೋಟಿ ರೂ. ಬಿಡುಗಡೆಯಾಗಿದೆ. ರಾಜ್ಯ ಸರ್ಕಾರ ಯೋಜನೆಯ ಅರ್ಧ ಪಾಲು ನೀಡಬೇಕು. ರಾಜ್ಯ ಸರ್ಕಾರ ಕನಿಷ್ಠ ಜಮೀನು ವಶದ ಹಣವನ್ನಾದರೂ ಕೊಡಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿ ಮನವಿ ಮಾಡಿಕೊಂಡಿದ್ದೇನೆ. ಈ ಯೋಜನೆ ಶೇ.100ರಷ್ಟು ಜಾರಿಗೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿರುವ ಸಿ.ಆರ್.ಸಿ. ಕೇಂದ್ರ ಬಾಡಿಗೆ ಕಟ್ಟಡದಲ್ಲಿದ್ದು, ಇದಕ್ಕಾಗಿ 12 ಎಕರೆ ಜಾಗ ಕಲ್ಪಿಸಿ ಸ್ವಂತ ಕಟ್ಟಡದ ಜೊತೆ ಸೌಲಭ್ಯ ಕಲ್ಪಿಸಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಕೇಳಿದ್ದಾರೆ. ಇದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವರು ಹೇಳಿದರು. ಪರಿಶಿಷ್ಟ ಜಾತಿ ಹಾಗೂ ಪಂಗಡದ ಐಎಎಸ್ ಅಧಿಕಾರಿಗಳ ಸಂಖ್ಯೆ ಕೇಂದ್ರ ಹಾಗೂ ರಾಜ್ಯ ಸಚಿವಾಲಯಗಳಲ್ಲಿ ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ ಐಎಎಸ್ (3ನೇ ಪುಟಕ್ಕೆ)

# ಬಿಪಿಎಲ್ ಹೊಂದಿರುವ ಎಲ್ಲರ ಮನೆಗಳಿಗೂ ವಿದ್ಯುತ್

**ಗ್ರಾಹಕ ಸಂಬಂಧಿ ಸಮಸ್ಯೆಗಳ ಪರಿಹಾರ, ಹೊಸ ವಿದ್ಯುತ್ ಸಂಪರ್ಕ ನೀಡಿಕೆ ಸೇರಿದಂತೆ ವಿವಿಧ ಸೇವೆಗಳನ್ನು ಒಂದೇ ಕಡೆ 24 ಗಂಟೆಯೊಳಗೆ ಒದಗಿಸುವ ಫಾಸ್ಟ್‌ಟ್ರ್ಯಾಕ್ ಸೆಲ್ಲನ್ನು ಕೂಡಲೇ ಆರಂಭಿಸುವಂತೆ ಇಂಧನ ಸಚಿವ ಸುನಿಲ್ ಕುಮಾರ್ ಸೂಚನೆ**

ಬೆಂಗಳೂರು, ಅ. 18 - ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಎಲ್ಲ ಮನೆಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಇಂಧನ ಸಚಿವ ಸುನೀಲ್ ಕುಮಾರ್ ತಿಳಿಸಿದ್ದಾರೆ.

ಇಲಾಖಾ ವಿದ್ಯುತ್ ಸರಬರಾಜು ಕಂಪನಿಗಳು ಅದರ ಅಂಗ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಪರಾಮರ್ಶೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ವಿದ್ಯುತ್ ಅಭಾವವಿಲ್ಲ. ಬೇಡಿಕೆಗಿಂತ ಉತ್ಪಾದನೆ ಹೆಚ್ಚಿದೆ ಎಂದವರು ಹೇಳಿದ್ದಾರೆ.

ಇದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಿ. ಬೆಳಕಿಲ್ಲದ ಮನೆಗಳಿಗೆ ಬೆಳಕು ನೀಡಿ. ಇದಕ್ಕಾಗಿ ಸರ್ಕಾರ ನೀಡಿರುವ ಅನುದಾನವನ್ನು ಸಮರ್ಪಕ ಬಳಕೆ ಮಾಡಿಕೊಳ್ಳಿ. ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಎಲ್ಲ ಕುಟುಂಬಗಳಿಗೂ ವಿದ್ಯುತ್ ಹರಿಸಿ ಎಂದರು.


ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವ ಕೆಲಸವೂ ಸಹ ಕಾಲಮಿತಿಯೊಳಗೆ ಮತ್ತು ಪರಿಣಾಮಕಾರಿಯಾಗಬೇಕೆಂದು ತಿಳಿಸಿದರು.

ಈ ಯೋಜನೆಯಡಿ ಕೊಳವೆ ಬಾವಿ ತೋಡಿದರೂ, ವಿದ್ಯುತ್ ಸಂಪರ್ಕ ಕಲ್ಪಿಸದೇ ಸಣ್ಣ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರದ ಯೋಜನೆಯನ್ನು ನಿಗದಿತ ವೇಳೆಯಲ್ಲಿ ಅನುಷ್ಠಾನಕ್ಕೆ ತಂದರೆ ಅನಗತ್ಯ ದುಂದುವೆಚ್ಚಕ್ಕೆ ಕಡಿವಾಣ ಹಾಕಬಹುದು ಎಂದಿದ್ದಾರೆ.

ಕೇಂದ್ರ ಸರ್ಕಾರದ ಸಹಯೋಗದಲ್ಲಿ ಯೋಜನೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಇದರಲ್ಲಿ ನಾನು ಯಾವುದೇ ಕಾರಣಕ್ಕೂ ರಾಜೀ ಆಗುವುದಿಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ ಬದಲಾವಣೆ ಕುರಿತಂತೆ ಬಹಳಷ್ಟು ದೂರುಗಳು ಬರುತ್ತಿವೆ. ಅವುಗಳ ಬಗ್ಗೆ ತಕ್ಷಣವೇ ಕ್ರಮ ಕೈಗೊಳ್ಳಿ. ಟ್ರಾನ್ಸ್‌ಫಾರ್ಮರ್‌ಗಳನ್ನು ನಿಗದಿತ ಸಮಯಕ್ಕೆ ಬದಲಾವಣೆ (2ನೇ ಪುಟಕ್ಕೆ)

# ಪಡಿತರ ಅಕ್ರಮ ತಡೆಗೆ ತಾಕೀತು



**ಕಾಳಸಂತೆಕೋರರನ್ನು ಮಟ್ಟ ಹಾಕದಿದ್ದರೆ ಜೈಲಿಗೆ : ಅಧಿಕಾರಿಗಳಿಗೆ ಎಚ್ಚರಿಕೆ**

ಹರಿಹರ, ಆ.18- ನ್ಯಾಯಬೆಲೆ ಅಂಗಡಿಯಲ್ಲಿ ಬಡವರಿಗೆ ವಿತರಣೆ ಮಾಡುವ ದಿನಸಿ ಪದಾರ್ಥಗಳನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುವವರನ್ನು ತಡೆಯುವಲ್ಲಿ ತಾಲ್ಲೂಕು ಆಹಾರ ಅಧಿಕಾರಿಗಳು ವಿಫಲರಾಗಿದ್ದು, ಅವರ ಜೊತೆಯಲ್ಲಿ ನೀವು ಕೂಡ ಜೈಲಿಗೆ ಹೋಗಬೇಕಾಗುತ್ತದೆ ಎಂದು ಶಾಸಕ ಎಸ್. ರಾಮಪ್ಪ ಎಚ್ಚರಿಸಿದರು.

ನಗರದ ತಾ.ಪಂ. ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಹೆಚ್ಚು ಬಡವರು ಇದ್ದಾರೆ. ಸರ್ಕಾರ ನ್ಯಾಯಬೆಲೆ ಅಂಗಡಿ ಮೂಲಕ ಅಕ್ಕಿ, ಗೋಧಿ, ಬೇಳೆ ಸೇರಿದಂತೆ ಹಲವಾರು ದಿನಸಿ ಪದಾರ್ಥಗಳನ್ನು ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ವಿತರಣೆ ಮಾಡದೆ, ಇಲ್ಲಿನ ನಾಲ್ವರು ಅಕ್ರಮ ಅಕ್ಕಿ ಮಾರಾಟಗಾರರಿಗೆ ನೀಡಲಾಗುತ್ತಿದೆ. ಅವರ ಹೆಸರನ್ನು ನಾನು ಹೇಳಬಲ್ಲೆ. ಅವರುಗಳಿಗೆ ಗೋಡೌನ್‌ನಿಂದ ನೇರವಾಗಿ ಸರಬರಾಜು ಆಗುತ್ತಿದೆ. ಅಧಿಕಾರಿಗಳಿಗೆ ಇದರ ಬಗ್ಗೆ ಮಾಹಿತಿ ಇದ್ದರೂ ಕೂಡ ಕ್ರಮ ಕೈಗೊಳ್ಳುವ ಸಾಹಸ ಮಾಡುತ್ತಿಲ್ಲ.

ನ್ಯಾಯಬೆಲೆ ಅಂಗಡಿಯಲ್ಲಿ ಸಾರ್ವಜನಿಕರಿಗೆ ಎರಡು ಕೆಜಿ ಕಡಿಮೆ ವಿತರಣೆ ಮಾಡಲಾಗುತ್ತದೆ. ಇದನ್ನು ಗಮನಿಸಲು ಸ್ಥಳ ಪರಿಶೀಲನೆ ಮಾಡಲು ಹೋಗದೆ, ಕಚೇರಿಯ ಕುಳಿತು ಕಾಲಹರಣ ಮಾಡುತ್ತಾ ಸಮಯ ಕಳೆಯುತ್ತಿದ್ದೀರಾ ಎಂದು ಆಹಾರ ಇಲಾಖೆಯ ನಸ್ರುಲ್ ಸಾಬ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಕೊಕ್ಕನೂರು ಆರೋಗ್ಯ ಕೇಂದ್ರದಲ್ಲಿ ಲಸಿಕೆಯನ್ನು ಮಾರಾಟ ಮಾಡುವುದಕ್ಕೆ ತೆಗೆದುಕೊಂಡು ಹೋಗುತ್ತಿದ್ದರು ಎನ್ನಲಾಗಿದೆ. ಈ ಕುರಿತು ತನಿಖೆ ನಡೆಸುವಂತೆ ಶಾಸಕರು ನಿರ್ದೇಶಿಸಿದರು.

ಪಶುಸಂಗೋಪನೆ ಇಲಾಖೆಯಿಂದ ರೈತರಿಗೆ ಇದುವರೆಗೂ ಒಂದು ಹಸು, ಎಮ್ಮೆ, ಕುರಿಯನ್ನೂ ಸಹ ವಿತರಣೆ ಮಾಡಿರುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಹಸುವಿಗೆ ರೋಗ ಬಂದಾಗ ಅವುಗಳಿಗೆ ನೀಡಲು ಔಷಧಿಯನ್ನು ಕೊಡುತ್ತಿಲ್ಲ ಎಂದು ರೈತರು ದೂರುತ್ತಾರೆ. ಭಾನುವಳ್ಳಿ, ಹನಗವಾಡಿ ಸೇರಿದಂತೆ ಇತರೆ ಗ್ರಾಮಗಳಲ್ಲಿ 6 ತಿಂಗಳಿಂದ ಹಸುವಿಗೆ ಚಿಕಿತ್ಸೆ ನೀಡಲು ವೈದ್ಯರು ಇರುವುದಿಲ್ಲ ಎನ್ನಲಾಗಿದೆ. ಬನ್ನಿಕೋಡು, ಬೆಳ್ಳೂಡಿ, ಭಾನುವಳ್ಳಿ, ಧೂಳೆಹೊಳೆ ದೇವರಬೆಳಕೆರೆ, ಕೊಕ್ಕನೂರು, ನಿಟ್ಟೂರುಗಳಲ್ಲಿ ಆಸ್ಪತ್ರೆ ಇದ್ದರೂ ಕೂಡ (2ನೇ ಪುಟಕ್ಕೆ)

## ಅಡುಗೆ ಅನಿಲ 25 ರೂ. ಹೆಚ್ಚಳ

### ಅಧಿವೇಶನದ ಹಿನ್ನೆಲೆ: ತಡವಾಗಿ ಬೆಲೆ ಏರಿಕೆ

ನವದೆಹಲಿ ಆ. 18 - ಕೇಂದ್ರ ಸರ್ಕಾರ ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರ್‌ಗೆ 25 ರೂ. ಹೆಚ್ಚಿಸಿದೆ. ಕಳೆದ ಎರಡು ತಿಂಗಳಿಂದ ಸತತ ಎರಡನೇ ಬಾರಿ ಅಡುಗೆ ಅನಿಲದ ಬೆಲೆ ಹೆಚ್ಚಾಗಿದೆ.



ಕಳೆದ ಜುಲೈ 1ರಂದು ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು 25.50 ರೂ.ಗಳಷ್ಟು ಹೆಚ್ಚಿಸಲಾಗಿತ್ತು.

ಸಬ್ಸಿಡಿಯೇತರ ಅಡುಗೆ ಅನಿಲದ ದರವನ್ನು ಆಗಸ್ಟ್ 1ರಂದು ಇದೇ ಪ್ರಮಾಣದಲ್ಲಿ ಹೆಚ್ಚಿಸಲಾಗಿತ್ತು. ಪ್ರಸಕ್ತ ಸಬ್ಸಿಡಿ ಸಹಿತ ಹಾಗೂ ಸಬ್ಸಿಡಿ ರಹಿತ ಸಿಲಿಂಡರ್ ಬೆಲೆ ಒಂದೇ ಹಂತಕ್ಕೆ ಬಂದಿವೆ.

ಸಂಸತ್ ಅಧಿವೇಶನ ಇದ್ದ ಕಾರಣ ಆಗಸ್ಟ್ 1ರಂದು ಸಬ್ಸಿಡಿ ಹೊಂದಿರುವ ಅಡುಗೆ ಅನಿಲದ ಬೆಲೆ ಹೆಚ್ಚಿಸಿರಲಿಲ್ಲ. ಅಡುಗೆ ಅನಿಲ ಬೆಲೆ ಆಗ ಹೆಚ್ಚಿಸಿದ್ದರೆ ಸರ್ಕಾರ ಪ್ರತಿಪಕ್ಷಗಳ ಟೀಕೆಗೆ ಗುರಿಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ತಡವಾಗಿ ಬೆಲೆ ಹೆಚ್ಚಿಸಲಾಗಿದೆ ಎಂದು ಉದ್ಯಮದ ಮೂಲಗಳು (2ನೇ ಪುಟಕ್ಕೆ)

## ಮುಜರಾಯಿ ದೇವಸ್ಥಾನಗಳ ಆಸ್ತಿ ಸಮೀಕ್ಷೆಗೆ ಸೂಚನೆ

ಬೆಂಗಳೂರು, ಆ. 18 - ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ರುವ ದೇವಸ್ಥಾನಗಳ ಆಸ್ತಿ ಸಮೀಕ್ಷೆ ನಡೆಸುವಂತೆ ಮುಜರಾಯಿ, ವಕ್ಫ್ ಮತ್ತು ಹಜ್ ಸಚಿವೆ ಶಶಿಕಲಾ ಜೊಲ್ಲೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲಾಖಾ ಅಧಿಕಾರ ವಹಿಸಿಕೊಂಡ ನಂತರ ಅಧಿಕಾರಿಗಳಿಗೆ ಇಲಾಖಾ ವ್ಯಾಪ್ತಿಯಲ್ಲಿರುವ ಎ, ಬಿ ಮತ್ತು ಸಿ ದರ್ಜೆಯ ಜಿಲ್ಲಾವಾರು ದೇವಸ್ಥಾನಗಳ ಮಾಹಿತಿ ಪಡೆದುಕೊಂಡು, ಆಸ್ತಿ ಎಷ್ಟಿದೆ ಎಂದು ಸಮೀಕ್ಷೆ ನಡೆಸಿ, ದೇವಸ್ಥಾನಗಳ ಆಸ್ತಿ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಇಲಾಖೆ ವ್ಯಾಪ್ತಿಯಲ್ಲಿರುವ (2ನೇ ಪುಟಕ್ಕೆ)

## ಕಾಳಸಂತೆಯಲ್ಲಿ ಕೋವಿಡ್ ಲಸಿಕೆ ಮಾರಾಟಕ್ಕೆತ್ನಿಸಿದ ಆಸ್ಪತ್ರೆ ಸಿಬ್ಬಂದಿ

**ಸರ್ಕಾರದ ನಿಯಮದಂತೆ ಲಸಿಕೆಯನ್ನು ಆಸ್ಪತ್ರೆಯಲ್ಲಿಡಬೇಕು. ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು ಎನ್ನುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಸಿಬ್ಬಂದಿಗಳಾದ ಶುಶ್ರೂಷಕಿ ರೂಪಾ, ಫಾರ್ಮಾಸಿಸ್ಟ್ ಲಕ್ಷ್ಮೀಶ್ ಲಾಟಿ ಇವರು ಕರ್ತವ್ಯ ಲೋಪವೆಸಗಿದ್ದಾರೆ. ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ.**

**- ಡಾ.ಚಂದ್ರಮೋಹನ್ ತಾಲ್ಲೂಕು ವೈಧ್ಯಾದಿಕಾರಿ**

ಹರಿಹರ, ಆ.18 - 70 ಡೋಸ್‌ಗಳಿರುವ ಕೋವಿಶೀಲ್ಡ್ ಲಸಿಕೆಯನ್ನು ಕಾಳಸಂತೆಯಲ್ಲಿ ಮಾರಾಟಕ್ಕೆಂದು ಆಸ್ಪತ್ರೆಯ ಸಿಬ್ಬಂದಿಗಳು ಮನೆಗೆ ತೆಗೆದುಕೊಂಡು ಹೋಗುತ್ತಿದರೆಂಬ ಆರೋಪದಲ್ಲಿ ಗ್ರಾಮಸ್ಥರು ಸಾಕ್ಷಿ ಸಮೇತ ಹಿಡಿದಿರುವ ಘಟನೆ ತಾಲ್ಲೂಕಿನ ಕೊಕ್ಕನೂರು ಗ್ರಾಮದಲ್ಲಿ ನಡೆದಿದೆ.



ಕೊಕ್ಕನೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಂದಿನಂತೆ ಲಸಿಕೆ ಹಾಕುವ ಕಾರ್ಯವು ನಿರಂತರವಾಗಿ ನಡೆಯುತ್ತಿತ್ತು. ಅದರಂತೆ ಸೋಮವಾರ 300 ಕೋವಿಶೀಲ್ಡ್ ಹಾಗೂ 200 ಕೋವ್ಯಾಕ್ಸಿನ್ ಲಸಿಕೆಯನ್ನು ಈ ಕೇಂದ್ರಕ್ಕೆ ನೀಡಲಾಗಿತ್ತು. ಸುಮಾರು 500 ಜನರಿಗೆ ಹಾಕುವ ಲಸಿಕೆಯಲ್ಲಿ 270 ಜನರಿಗೆ ಮಾತ್ರ ಹಾಕಲಾಗಿತ್ತು.ಉಳಿದ 230 ಡೋಸ್‌ಗಳಲ್ಲಿ 180 ಡೋಸನ್ನು ಆಸ್ಪತ್ರೆಯ ಶೀತಲ ಶೇಖರಣಾ ಘಟಕದಲ್ಲಿಟ್ಟು 70 ಡೋಸ್‌ಗಳನ್ನು ಶುಶ್ರೂಷಕಿ ರೂಪಾ ಹಾಗೂ (2ನೇ ಪುಟಕ್ಕೆ)

## 11 ಪಾಸಿಟಿವ್, 1 ಸಾವು, 5 ಗುಣಮುಖ

ದಾವಣಗೆರೆ, ಆ.18- ಜಿಲ್ಲೆಯಲ್ಲಿ ಬುಧವಾರ 11 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 5 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 6, ಚನ್ನಗಿರಿ 2, ಜಗಳೂರು 2 ಹಾಗೂ ಹೊನ್ನಾಳಿ ತಾಲ್ಲೂಕಿನ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 194 ಸಕ್ರಿಯ ಪ್ರಕರಣಗಳಿವೆ.



## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

॥ ಓಂ ನಮಃ ಶಿವಾಯ ॥
ದಾವಣಗೆರೆ ಸಿಟಿ ಬಸವರಾಜ ಪೇಟೆ ವಾಸಿಗಳಾದ
ಶ್ರೀಮತಿ ರೂಪ ಪರಮೇಶ್ವರಪ್ಪ ಎನ್. (ಸೀಮೆಎಣ್ಣೆ) ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪೂಜ್ಯ ಪತಿಯವರಾದ



ಶ್ರೀ ಪರಮೇಶ್ವರಪ್ಪ ಎನ್. (ಸೀಮೆಎಣ್ಣೆ)
ದಲಿತ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಕಾಂಗ್ರೆಸ್ ಮುಖಂಡರು
ಇವರು ದಿನಾಂಕ 11.08.2021ರ ಬುಧವಾರ ಸಾಯಂಕಾಲ 8.30 ಗಂಟೆಗೆ
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 19-08-2021ನೇ ಗುರುವಾರ ಬೆಳಗ್ಗೆ 10.15 ಗಂಟೆಗೆ ದಾವಣಗೆರೆ
ಬಸವರಾಜಪೇಟೆಯ ಬಸವೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಬಿ.ಹೆಚ್. ಮಲ್ಲೇಶಪ್ಪ (ಸೀಮೆಎಣ್ಣೆ), ಮಾಜಿ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.
ಮತ್ತು ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.





# ಭದ್ರಾ ಅಚ್ಚುಕಟ್ಟಿನಲ್ಲೀಗ 14 ಸಾವಿರ ಹೆಕ್ಟೇರ್ ಅಡಿಕೆ ತೋಟ

## ರೈತರಿಂದ ಪರ್ಯಾಯ ಚಿಂತನೆ ; ಭದ್ರೆಗೆ ಬಾಗಿನ ಅರ್ಪಿಸಿದ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ

ಬಿ.ಆರ್. ಪ್ರಾಜೆಕ್ಟ್, ಆ.18- ಮಧ್ಯ ಕರ್ನಾಟಕದ ಜೀವನಾಡಿ ಭದ್ರಾ ಜಲಾಶಯಕ್ಕೆ ಮಂಗಳವಾರ ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳ ವತಿಯಿಂದ ಗಂಗೆಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಹಾಮಂಡಳದ ಅಧ್ಯಕ್ಷ ಹೊಸಹಳ್ಳಿಯ ವೈ. ದ್ಯಾವಪ್ಪ ರೆಡ್ಡಿ ಮಾತನಾಡಿ, ಭದ್ರಾ ಅಚ್ಚುಕಟ್ಟಿನಲ್ಲಿ ಭತ್ತ ಬೆಳೆಯುತ್ತಿದ್ದ 14 ಸಾವಿರ ಹೆಕ್ಟೇರ್ ಪ್ರದೇಶ ಈಗ ಅಡಿಕೆ ತೋಟವಾಗಿದೆ. ಇನ್ನು ಮುಂದೆ ರೈತರು ಪರ್ಯಾಯ ಬೆಳೆ ಬೆಳೆಯುವ ಬಗ್ಗೆ ಚಿಂತನೆ ನಡೆಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಅಪ್ಪರ್ ಭದ್ರಾ ಕಾಲುವೆಗೆ ಹರಿಸಬೇಕಾದ 29 ಟಿಎಂಸಿ ನೀರನ್ನು ತುಂಗಾ ಜಲಾಶಯದಿಂದಲೇ ಲಿಫ್ಟ್ ಮಾಡುವ ಬಗ್ಗೆ ಸರ್ಕಾರ ಹೊಸ ಡಿಪಿಆರ್ ಸಿದ್ಧಪಡಿಸಬೇಕೆಂದು ಒತ್ತಾಯಿಸಿದ ಅವರು, ಅಚ್ಚುಕಟ್ಟಿನ ರೈತರಿಗೆ ತೊಂದರೆ ಮಾಡಿ ಅಪ್ಪರ್ ಭದ್ರಾ ಕಾಲುವೆಗೆ ನೀರು ಹರಿಸಲು ಅವಕಾಶ ನೀಡುವುದಿಲ್ಲ ಎಂದರು.



ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಎಫ್ಐಸಿ ಹಾಗೂ ಎಫ್‌ಡಿ ಮತ್ತು ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಅನುದಾನ ಒದಗಿಸಬೇಕು. ಅಲ್ಲದೆ, ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಕಾಲುವೆಗಳ ನಿರ್ವಹಣೆ ಜವಾಬ್ದಾರಿ ನೀಡಲಿ ಎಂದು ರೆಡ್ಡಿ ಆಗ್ರಹಿಸಿದರು.

ಮಹಾಮಂಡಳದ ಉಪಾಧ್ಯಕ್ಷ ಆರ್. ಶ್ರೀನಿವಾಸ್, ನಿರ್ದೇಶಕರಾದ ಬೆಳಲಗೆರೆ ದೇವೇಂದ್ರಪ್ಪ, ಗೊಲ್ಲರಹಳ್ಳಿ ಹರೀಶ್, ಕಡ್ಲೆಗೊಂದಿ ಹನುಮಂತ ರೆಡ್ಡಿ, ಗೋಪನಹಾಳ್ ಬಂಧು, ತರೀಕೆರೆಯ ಮಲ್ಲಿಕಾರ್ಜುನಪ್ಪ, ಗಂಗನರಸಿ ಸಿದ್ದಪ್ಪ, ಹಾಲಿವಾಣದ ಸಣ್ಣ ಪರಮೇಶ್ವರಪ್ಪ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರಾದ ಕೊಮಾರನ ಹಳ್ಳಿಯ ಜಿ. ಮಂಜುನಾಥ್ ಪಟೇಲ್, ಮಲೇಬೆನ್ನೂರಿನ ಬಿ. ವೀರಯ್ಯ, ಭಾನುವಳ್ಳಿಯ ಜೆ. ಗುತ್ತೆಪ್ಪ, ಬಿ.ಎನ್. ಕೆಂಚಪ್ಪ, ಹೆಚ್. ನಾರಾಯಣಪ್ಪ, ವಾಸನದ ವೀರನಗೌಡ, ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ಹೆಚ್. ದಿವಾಕರಪ್ಪ, ಜಿಗಳಿ ಆನಂದಪ್ಪ, ಕೊಕ್ಕನೂರು ಸೋಮಶೇಖರ್, ಹಳ್ಳಿಹಾಳ್ ವೀರನಗೌಡ, ಕುಣೆಬೆಳಕೆರೆ ರುದ್ರಪ್ಪ, ನಂದಿತಾವರೆ ಮುರುಗೇಂದ್ರಯ್ಯ ಇನ್ನಿತರರು ಹಾಜರಿದ್ದರು.

## ಅಡುಗೆ ಅನಿಲ 25 ರೂ. ಹೆಚ್ಚಳ

**(1ನೇ ಪುಟದಿಂದ)** ತಿಳಿಸಿವೆ.

ಜನವರಿ 1ರ ನಂತರ ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರ್‌ಗೆ 165 ರೂ.ಗಳಷ್ಟು ಹೆಚ್ಚಿಸಲಾಗಿದೆ.

ಪ್ರತಿ ತಿಂಗಳು ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರ ಸರ್ಕಾರ ಅಡುಗೆ ಅನಿಲದ ಸಬ್ಸಿಡಿಯನ್ನು ನಿವಾರಿಸಿದೆ. ಕಳೆದ ಏಳು ವರ್ಷಗಳಲ್ಲಿ ಅಡುಗೆ ಅನಿಲದ ಬೆಲೆ ಎರಡು ಪಟ್ಟು ಹೆಚ್ಚಾಗಿದೆ.

ಮಾರ್ಚ್ 1, 2014ರಲ್ಲಿ ಅಡುಗೆ ಅನಿಲದ ಬೆಲೆ ಸಿಲಿಂಡರ್‌ಗೆ 410.50 ರೂ. ಆಗಿತ್ತು. ಪ್ರಸಕ್ತ ಅದರ ಬೆಲೆ 872.50 ರೂ.ಗಳಿಗೆ ತಲುಪಿದೆ. ಇದೇ ದಿನ ಡೀಸೆಲ್ ಬೆಲೆಯನ್ನು ಲೀಟರ್‌ಗೆ 21 ಪೈಸೆಯಷ್ಟು ಇಳಿಕೆ ಮಾಡಲಾಗಿದೆ. ಪೆಟ್ರೋಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರೆದಿದೆ. ಈ ತಿಂಗಳಲ್ಲಿ ಮೊದಲ ಬಾರಿಗೆ ಇಂಧನ ಬೆಲೆಯಲ್ಲಿ ಬದಲಾವಣೆ ಮಾಡಲಾಗಿದೆ.

## ಎಸ್ಸೆಸ್ಸೆಲ್ಸಿ : ನಿಂಚನಕ್ಕೆ ಶೇ. 100 ಫಲಿತಾಂಶ

ದಾವಣಗೆರೆ, ಆ.18- ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಿಂಚನ ಪಬ್ಲಿಕ್ ಶಾಲೆಗೆ ಶೇ. 100 ರಷ್ಟು ಫಲಿತಾಂಶ ದೊರೆತಿದೆ. ಮದೀಹನಾಜ್ ಶೇ. 93.44 ಪಡೆದಿದ್ದಾರೆ. ಪಿ.ರೇಣುಕ, ಬಿ.ಎಸ್. ಚೈತ್ರಾ, ಎ.ಸಾಕ್ಷಿ, ಎಸ್. ಸುಹಾಸ್, ಬಿ. ಪಲ್ಲವಿ, ಬಿ.ಪಿ. ಗುಫ್ರಾನ್ ಇವರುಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. 57 ವಿದ್ಯಾರ್ಥಿಗಳು ಪ್ರಥಮ ಹಾಗೂ ಓರ್ವ ವಿದ್ಯಾರ್ಥಿನಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಎಸ್ಸಿ ಸಚಿವರ ಪರಿಚಯಕ್ಕೆ ಕಾಂಗ್ರೆಸ್ ಅಡ್ಡಿ

**(1ನೇ ಪುಟದಿಂದ)** ಪರಿಚಯಿಸಲು ಕಾಂಗ್ರೆಸ್ ಅವಕಾಶ ಕೊಡಲಿಲ್ಲ. ಹೀಗಾಗಿ ಸಚಿವರು ನೇರವಾಗಿ ಜನರ ಬಳಿ ಹೋಗಿ ಜನಾಶೀರ್ವಾದ ಪಡೆಯಬೇಕೆಂದು ಪಕ್ಷ ನಿರ್ಧರಿಸಿದೆ ಎಂದವರು ಹೇಳಿದರು.

ಸಂಸದೀಯ ಪ್ರಜಾಪ್ರಭುತ್ವದ ನಡಾವಳಿಗಳನ್ನು ಉಲ್ಲಂಘಿಸಿದ ಪ್ರತಿಪಕ್ಷಗಳ ಸದಸ್ಯರು, ಸಭಾಧ್ಯಕ್ಷರ ಮುಖಕ್ಕೆ ಪುಸ್ತಕಗಳನ್ನು ಎಸೆದಿದ್ದಾರೆ. ಅಧಿಕಾರಿಗಳ ಟೇಬಲ್ ಮೇಲೆ ಹತ್ತಿ ಕುಣಿದಿದ್ದಾರೆ ಎಂದವರು ತರಾಟೆಗೆ ತೆಗೆದುಕೊಂಡರು. ಕೊರೊನಾ ಲಸಿಕೆಗೆ ಮೊದಲಿನಿಂದಲೂ ಕಾಂಗ್ರೆಸ್ ಹಾದಿ ಬೀದಿಯಲ್ಲಿ ಅಪ ಪ್ರಚಾರ ಮಾಡುತ್ತಿದೆ. ಆದರೆ, ನಾವು ಅದಕ್ಕೆ ಕಿವಿಗೊಡದೆ ಕೆಲಸ ಮಾಡಿದ್ದೇವೆ. ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದ್ದೇವೆ. ಕಾಂಗ್ರೆಸ್ - ಜೆಡಿಎಸ್‌ಗಳಿಗೆ ಕೆಲಸ ಇಲ್ಲದೇ ಟೀಕಿಸುತ್ತಿವೆ ಎಂದವರು ಲೇವಡಿ ಮಾಡಿದರು.


ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, 2023ರ ವಿಧಾನಸಭಾ ಚುನಾವಣೆಗೆ ಪಕ್ಷ ಇಂದಿನಿಂದಲೇ ಸಿದ್ಧತೆ ಆರಂಭಿಸಬೇಕು. ಬೂತ್‌ನಿಂದ ಹಿಡಿದು ತಾಲ್ಲೂಕಿನವರೆಗೆ ಸಂಘಟನೆ ಆಗಬೇಕು ಎಂದು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಮುಂದಿನ ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಯಾರಿಗೇ ಟಿಕೆಟ್ ಕೊಟ್ಟರೂ ಪಕ್ಷಕ್ಕಾಗಿ ದುಡಿಯಬೇಕು. ಪಕ್ಷ ಗೆದ್ದರೆ ಅಭಿವೃದ್ಧಿ ಕೆಲಸಗಳಾಗುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಂ.ಎಲ್.ಸಿ. ವೈ.ಎ. ನಾರಾಯಣ ಸ್ವಾಮಿ, ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಪ್ರೊ. ಲಿಂಗಣ್ಣ, ಎಂ.ಪಿ. ರೇಣುಕಾಚಾರ್ಯ, ಎಸ್.ಎ. ರವೀಂದ್ರನಾಥ್, ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ಬಿ. ನಂದೀಶ್, ರಾಜ್ಯ ಕಾರ್ಯದರ್ಶಿ ಕೆ.ಎಸ್. ನವೀನ್, ಮಾಜಿ ಶಾಸಕ ಬಸವರಾಜ ನಾಯ್ಕ, ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಣಬೇರು ಜೀವನಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಸಹನ ಮಂಜುನಾಥ್ ಪ್ರಾರ್ಥಿಸಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಸ್ವಾಗತಿಸಿದರು. ಬಿ.ಎಸ್. ಜಗದೀಶ್ ನಿರೂಪಿಸಿದರು.

## ಪಡಿತರ ಅಕ್ರಮ ತಡೆಗೆ ಶಾಸಕರ ತಾಕೀತು



**(1ನೇ ಪುಟದಿಂದ)** ವೈದ್ಯರು ಇಲ್ಲ ಎಂದು ದೂರುತ್ತಾರೆ. ಯಾವ ಯಾವ ಗ್ರಾಮಗಳಲ್ಲಿ ಪಶು ವೈದ್ಯರ ಕೊರತೆ ಇದೆ ಎಂಬುದನ್ನು ಪಟ್ಟಿ ಮಾಡಿ ಕೊಡಿ ಎಂದು ಅವರು ಸೂಚಿಸಿದರು.

ಜಿ.ಪಂ. ಇಲಾಖೆಯ ಆಡಳಿತಾಧಿಕಾರಿ ಡಿ.ಆರ್. ಮಧು, ತಾ.ಪಂ. ಇಒ ಗಂಗಾಧರನ್ ಮಾತನಾಡಿದರು.

ಬಿಇಓ ಬಿ.ಸಿ. ಸಿದ್ದಪ್ಪ ಮಾತನಾಡಿ, ಇದೇ ದಿನಾಂಕ 23 ರಂದು 9 ಮತ್ತು 10 ತರಗತಿಯ ಮಕ್ಕಳಿಗೆ ತರಗತಿ ಮಾಡಲು ಸರ್ಕಾರ ಆದೇಶಿಸಿದೆ. ಒಂದು ಕೊಠಡಿಯಲ್ಲಿ 15 ರಿಂದ 20 ಮಕ್ಕಳಿಗೆ ಪಾಠಗಳನ್ನು ಮಾಡಲಾಗುತ್ತದೆ. ಶಾಲೆಯ ಆವರಣ ಮತ್ತು ಕೊಠಡಿಗಳಿಗೆ ಔಷಧಿ ಸಿಂಪಡಣೆ ಮಾಡಲಾಗಿದೆ. ಶಾಲೆಗೆ ಕಡ್ಡಾಯವಾಗಿ ಮಕ್ಕಳು ಬರಲೇ ಬೇಕು ಎಂದು ಇಲ್ಲ. ಶಾಲೆಗೆ ಬರದೆ ಇದ್ದರೂ ಸಹ ಅವರಿಗೆ ಹಾಜರಾತಿ ನೀಡಲಾಗುತ್ತದೆ. ಶಾಲೆಗೆ ಬರದೇ ಇರುವ ಮಕ್ಕಳು ಮನೆಯಲ್ಲಿ ಚಂದನ ಟಿ.ವಿ. ನೋಡಿ ಪಾಠವನ್ನು ಕಲಿಯಬಹುದು ಎಂದು ಹೇಳಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ಇದುವರೆಗೂ ಹರಿಹರ ತಾಲ್ಲೂಕಿನಲ್ಲಿ 6 410 ಜನರಿಗೆ ಕೊರೊನಾ ಸೋಂಕು ತಗುಲಿದೆ. ಆದರೆ, ಎಷ್ಟು ಜನರು ಮರಣ ಹೊಂದಿದ್ದಾರೆ ಎಂಬ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲಾಗುವುದು. ತಾಲ್ಲೂಕಿಗೆ ಇಲ್ಲಿಯವರೆಗೆ 1 ಲಕ್ಷದ 728 ಲಸಿಕೆ ಸರಬರಾಜು ಆಗಿದೆ ಎಂದು ಅವರು ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ಅಧಿಕಾರಿ ರೇಖಾ ಮಾತನಾಡಿ, ಕೊರೊನಾ ಸಮಯದಲ್ಲಿ ರೈತರ ಕುಟುಂಬಗಳಿಗೆ ಸರ್ಕಾರ 10 ಸಾವಿರ ರೂ. ಸಹಾಯ ಧನವನ್ನು ನೀಡಿದ್ದು, ಅದರಲ್ಲಿ ಹರಿಹರ ತಾಲ್ಲೂಕಿನ 464 ರೈತರ ಖಾತೆಗೆ ನೇರವಾಗಿ ಹಣವನ್ನು ಹಾಕಲಾಗಿದೆ. ಹನಿ ನೀರಾವರಿಗೆ ಈ ಬಾರಿ ಯಾವುದೇ ಹಣವನ್ನು ಸರ್ಕಾರ ಬಿಡುಗಡೆ ಮಾಡಿರುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿ ಶಿವಮೂರ್ತಿ, ಸಿಡಿಪಿಓ ನಿರ್ಮಲ, ಲ್ಯಾಂಡ್ ಆರ್ಮಿ ಗಣೇಶ ಬಾಬು, ಬೆಸ್ಕಾಂ ಇಲಾಖೆ ಕರಿಬಸವರಾಜ್, ತಾ.ಪಂ. ಲೆಕ್ಕಾಧಿಕಾರಿ ಲಿಂಗರಾಜ್ ಇನ್ನಿತರರಿದ್ದರು.

## ಮುಜರಾಯಿ ಆಸ್ತಿ ಸಮೀಕ್ಷೆಗೆ ಸೂಚನೆ

**(1ನೇ ಪುಟದಿಂದ)** ದೇವಸ್ಥಾನಗಳಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಅಲ್ಲದೆ ಭಕ್ತರಿಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮುಜರಾಯಿ ಇಲಾಖೆಯಿಂದ ಸಾರ್ವಜನಿಕರಿಗೆ ದೊರೆಯುವ ಯೋಜನೆಗಳ ಮಾಹಿತಿ ಪಡೆದುಕೊಂಡರು. ರಾಜ್ಯದ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳ ಬಳಿ ಭಕ್ತರಿಗೆ ವಸತಿಗಾಗಿ ಎಷ್ಟು ಯಾತ್ರಿ ನಿವಾಸಗಳಿವೆ. ರಾಜ್ಯದಲ್ಲಿ ಯಾವ ದೇವಸ್ಥಾನದ ವ್ಯಾಪ್ತಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ ಮಾಡಲು ಅವಕಾಶ ಇದೆ ಎನ್ನುವ ಬಗ್ಗೆ ಸಂಪೂರ್ಣ ಅಗತ್ಯ ಮಾಹಿತಿ ನೀಡುವಂತೆ ಸೂಚಿಸಿದರು.

ಅಲ್ಲದೇ ಮಹಾರಾಷ್ಟ್ರದ ಪಂಡರಾಪುರ ಹಾಗೂ ತುಳಜಾಭವಾನಿ ದೇವಸ್ಥಾನದ ಬಳಿ ತಿರುಪತಿ ಮಾದರಿ ಯಾತ್ರಿ ನಿವಾಸ್ ನಿರ್ಮಾಣ ಮಾಡುವ ಕುರಿತು ಅಲ್ಲಿನ ರಾಜ್ಯ ಸರ್ಕಾರದ ಜಮೀನು ಎಷ್ಟಿದೆ ಎನ್ನುವ ಮಾಹಿತಿ ಪಡೆಯುವಂತೆ ಸೂಚಿಸಿದರು. ಆಂಧ್ರಪ್ರದೇಶದ ಶ್ರೀಶೈಲಂಗೆ ಭೇಟಿ ನೀಡಿ ಅಲ್ಲಿಯೂ ರಾಜ್ಯದ ಭಕ್ತರಿಗೆ ಅಗತ್ಯ ಮೂಲ ಸೌಕರ್ಯ ಹಾಗೂ ಯಾತ್ರಿ ನಿವಾಸ ನಿರ್ಮಾಣ ಮಾಡುವ ಕುರಿತು ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದರು.

ಅದೇ ರೀತಿ, ತಮಿಳುನಾಡು, ಕೇರಳದ ಪ್ರಸಿದ್ಧ ದೇವಸ್ಥಾನಗಳಲ್ಲಿ ಯಾತ್ರಿ ನಿವಾಸಗಳನ್ನು ತೆರೆಯುವ ಬಗ್ಗೆ ವಸ್ತುಸ್ಥಿತಿ ವರದಿ ನೀಡುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇನ್ನು ರಾಜ್ಯ ಸರ್ಕಾರದ ಮಹತ್ವದ ಸಾಮೂಹಿಕ ಮದುವೆ ಯೋಜನೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, ಈ ಯೋಜನೆ ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಈ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ನೀಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಯೋಜನೆ ಯಶಸ್ಸಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

## ಲಸಿಕೆ ಮಾರಾಟಕ್ಕೆತ್ನಿಸಿದ ಆಸ್ಪತ್ರೆ ಸಿಬ್ಬಂದಿ

**(1ನೇ ಪುಟದಿಂದ)** ಫಾರ್ಮಾಸಿಸ್ಟ್ ಲಕ್ಷ್ಮೀಶ್ ಲಾಟಿ ಎಂಬ ಆಸ್ಪತ್ರೆಯ ಸಿಬ್ಬಂದಿಗಳು ಕಾಳ ಸಂತೆಯಲ್ಲಿ ಮಾರಾಟಕ್ಕೆಂದು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು ಎನ್ನಲಾಗಿದೆ.

ಈ ವಿಷಯ ತಿಳಿದ ಗ್ರಾಮದ ಯುವಕರಾದ ಶಾಂತರಾಜ್ ಮತ್ತು ಶಿವರಾಜ್ ಇಬ್ಬರು ಆಸ್ಪತ್ರೆ ಸಿಬ್ಬಂದಿಯನ್ನು ಬೈಕ್‌ನಲ್ಲಿ ಹಿಂಬಾಲಿಸಿ ನಂದಿತಾವರೆ ಬಳಿ ಅಡ್ಡಗಟ್ಟಿ ಬೈಕ್ ನಿಲ್ಲಿಸಿ ತಮ್ಮ ಬ್ಯಾಗಿನಲ್ಲಿರುವುದು ಏನು ಎಂದು ಪ್ರಶ್ನಿಸಿದಾಗ, ಆಸ್ಪತ್ರೆಯ ವಿಚಾರ ನಿಮಗೇಕೆ ? ಎಂದು ಸಿಬ್ಬಂದಿಗಳು ಮರು ಪ್ರಶ್ನಿಸಿದ್ದಾರೆ.

ಇಷ್ಟಕ್ಕೆ ಸುಮ್ಮನಾಗದ ಯುವಕರು ಇವರನ್ನು ಮರಳಿ ಕೊಕ್ಕನೂರಿಗೆ ಕರೆತಂದು ಗ್ರಾಮಸ್ಥರ ಸಮ್ಮುಖದಲ್ಲಿ ಬ್ಯಾಗ್ ಪರಿಶೀಲಿದಾಗ 7 ಕೋವಿಡ್ ಶೀಲ್ಡ್ ವಾಯಿಲ್ ಪತ್ತೆಯಾಗಿವೆ. ಸಿಬ್ಬಂದಿಗಳನ್ನು ಗ್ರಾಮಸ್ಥರು ಹಿಗ್ಗಾಮುಗ್ಗಾ ತರಾಟೆ ತೆಗೆದುಕೊಂಡಿದ್ದಾರೆ.

ರಜೆಯ ಮೇಲೆ ತೆರಳಿದ್ದ ಕೊಕ್ಕನೂರು ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯ ಖಾದರ್ ಸಾಬ್ ಅವರನ್ನು ಸ್ಥಳಕ್ಕೆ ಕರೆಸಿಕೊಂಡು ಸಿಬ್ಬಂದಿಗಳ ಅವ್ಯವಹಾರದ ಬಗ್ಗೆ ಸಾಕ್ಷಿ ಸಮೇತ ವಿವರಣೆ ನೀಡಿ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.



ಮಂಗಳವಾರ ಬೆಳಿಗ್ಗೆ ತಾಲ್ಲೂಕು ವೈದ್ಯಾಧಿಕಾರಿ ಡಾ.ಚಂದ್ರಮೋಹನ್ ಕೊಕ್ಕನೂರು ಗ್ರಾಮಕ್ಕೆ ಭೇಟಿ ನೀಡಿ ಸಿಬ್ಬಂದಿಗಳು ಹಾಗೂ ವೈದ್ಯ ಮತ್ತು ಗ್ರಾಮಸ್ಥರಿಂದ ವರದಿ ಪಡೆದು ಇಲಾಖೆ ಸಿಬ್ಬಂದಿಗಳು ಮಾಡಿರುವ ತಪ್ಪಿನ ವರದಿಯನ್ನು ಜಿಲ್ಲಾ ವೈದ್ಯಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮಕೈಗೊಳ್ಳುವ ಭರವಸೆಯನ್ನು ಗ್ರಾಮಸ್ಥರಿಗೆ ನೀಡಿದ್ದಾರೆ.

## ಮನೆಗಳಿಗೂ ವಿದ್ಯುತ್: ಸುನಿಲ್

**(1ನೇ ಪುಟದಿಂದ)** ಮಾಡದಿದ್ದರೆ, ರೈತರ ಬೆಳೆಗೆ ಸೂಕ್ತ ಸಮಯದಲ್ಲಿ ನೀರು ಹರಿಸದಿರುವುದರಿಂದ ಅವರು ಸಂಕಷ್ಟಕ್ಕೆ ಸಿಲುಕುತ್ತಾರೆ. ಅನಗತ್ಯವಾಗಿ ವಿಳಂಬ ಮಾಡಬೇಡಿ ಎಂದು ಸೂಚಿಸಿದರು.


**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409

**ಸೈಟ್ ಮಾರಾಟಕ್ಕೆ (39 ಲಕ್ಷಕ್ಕೆ)**
ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ (KHB) ಅಂದಾಜು 40×60 ವೆಸ್ಟ್ ಡಬಲ್ ರೋಡ್ ಗೆ ದಾವಣಗೆರೆ ಯಿಂದ ಮೊದಲ ಭಾಗದಲ್ಲಿ ಜಿನಿಸಿಸ್ ರೆಸಾರ್ಟ್ ಮುಂಭಾಗ
ಕಿರಣ್ ಬೂಸ್ನೂರ್
98440 63409, 97315 63409

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಹರಪನಹಳ್ಳಿಯಲ್ಲಿ ಮನೆ ಮಾರಾಟಕ್ಕಿದೆ**
ಹರಪನಹಳ್ಳಿ ಪಟ್ಟಣದ ಕುರುಬರಗೇರಿ ರಸ್ತೆಗೆ ಹೊಂದಿಕೊಂಡಂತಿರುವ 22×55 ಅಡಿ ಅಳತೆಯ ಎರಡು ಅಂತಸ್ತಿನ RCC ಬಿಲ್ಡಿಂಗ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿರಿ :
ಮೊ. : 97439 78754

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಕಾರ್ನರ್ ಸೈಟ್‌ಗಳು ಮಾತ್ರ ಮಾರಾಟಕ್ಕಿವೆ**
50x68 East South Corner,
40x50 South west Corner,
40x50 North west Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಮಾರಾಟಕ್ಕಿದೆ**
ಉತ್ತರ ದಿಕ್ಕು 30x40 ಹರಿಹರ ವಿದ್ಯಾನಗರ ಸಿಟಿ ಸೆಂಟರ್ ಹತ್ತಿರ 2 ರೂಂ ಒಂದು ಅಟ್ಯಾಚ್ ಟಾಯ್ಲೆಟ್, ಒಂದು ಸೆಲ್ಲರ್ ರೂಂ, ಕಾರ್ ಪಾರ್ಕಿಂಗ್, 80% ಟೀಕ್ ವುಡ್, ವೈಟ್ ಮಾರ್ಬಲ್ ಫ್ಲೋರಿಂಗ್
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
78920 57569, 97432 45445

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್ 2ನೇ ಕ್ರಾಸ್, ಲಕ್ಷ್ಮಿ ಫ್ಲೋರ್ ಮಿಲ್ ಹಿಂಭಾಗದ ಮನೆ ಮಾರಾಟಕ್ಕಿದೆ.
ವಿಚಾರಿಸಿರಿ
96864 19566

**ಬೇಕಾಗಿದ್ದಾರೆ**
ಹುಲಿಗೆಮ್ಮ ಪ್ರಸನ್ನ ನಾನ್‌ವೆಜ್ ಹೋಟೆಲ್‌ನಲ್ಲಿ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
98448 78759

**ಮನೆ ಲೀಸ್‌ಗೆ ಇದೆ**
ಬಾಲಾಜಿ ಬಡಾವಣೆಯಲ್ಲಿ 2 ಬೆಡ್ ರೂಮ್, ಕಾರ್ ಪಾರ್ಕಿಂಗ್ ಇರುವ ಹೊಸ ಮನೆ ಲೀಸ್‌ಗೆ ಇದೆ. ವಿಚಾರಿಸಿ
83104 08375

**ಮನೆ ಬಾಡಿಗೆಗಿದೆ**
2 ಬೆಡ್ ರೂಂ, ಸುಸಜ್ಜಿತ ಮೊದಲ ಮಹಡಿ ಮನೆ 3ನೇ ಮೇನ್, 3ನೇ ಕ್ರಾಸ್, ಎಂಸಿಸಿ ಎ ಬ್ಲಾಕ್, ಮೋಹನ್ ಕಾಫಿ ಬಾರ್ ಹತ್ತಿರ, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ :
94483 55596
97400 03946

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಸಿಟಿ ಅಶೋಕ ನಗರ 15x40 ಅಳತೆಯ ಉತ್ತರ ದಿಕ್ಕಿನಲ್ಲಿರುವ ರೆವಿನ್ಯೂ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
98800 32181

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. : 97400 01117

**ಮನೆ ಮತ್ತು ಸೈಟು ಮಾರಾಟಕ್ಕಿವೆ**
40x60 North, 3ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ
60x40 North, ಸೈಟ್, ಸಿದ್ದವೀರಪ್ಪ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**2BHK ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ಮಹಾಲಕ್ಷ್ಮಿ ಬಡಾವಣೆ ಕಾವೇರಿ ಅಪಾರ್ಟ್‌ಮೆಂಟ್ ಹಿಂಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಆಧುನಿಕ ಸೌಲಭ್ಯವುಳ್ಳ ಮನೆಗಳು ಬಾಡಿಗೆ/ಲೀಸ್‌ಗೆ ಇವೆ.
73380 43912
63663 27368

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ :
ಎಮ್‌ಎಸ್‌ವಿ ಎಂಟರ್‌ಪ್ರೈಸಸ್
ಜಯದೇವ ಪ್ರೆಸ್ ಹಿಂಭಾಗ, 1ನೇ ಕ್ರಾಸ್, ದಾವಣಗೆರೆ.
8904313960, 9611887060

**ಹೊಸ ಮನೆ ಲೀಸ್‌ಗೆ / ಮಾರಾಟಕ್ಕೆ**
ಬಾಡಾ ಕ್ರಾಸ್ ಜೈನ್ ಕಾಲೇಜ್ ಹತ್ತಿರ 3ಬೆಡ್ ರೂಂ 3ಬಾತ್ ರೂಮ್ ಇರುವ ಹೊಸ ಮನೆ ಲೀಸ್ ಗೆ ಮತ್ತು ಮಾರಾಟಕ್ಕೆ ಇರುತ್ತದೆ. ಸಂಪರ್ಕಿಸಿ
84949 88799

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ -ದಾವಣಗೆರೆ
(owners only Call me)
74112 50447

**ಡೆಸ್ಕ್‌ಗಳು ಮಾರಾಟಕ್ಕಿವೆ**
ಕಾಲೇಜು, ಟ್ಯುಟೋರಿಯಲ್ ಮತ್ತು ಕೋಚಿಂಗ್ ಸೆಂಟರ್‌ಗಳಿಗೆ ಸರಿ ಹೊಂದುವ ಉತ್ತಮ ಗುಣಮಟ್ಟದ 25 ಕಬ್ಬಿಣದ ಡೆಸ್ಕ್‌ಗಳು (ಒಟ್ಟು 5 ಜನ ಕೂರಬಹುದು) ಯೋಗ್ಯ ಬೆಲೆಗೆ ಮಾರಾಟಕ್ಕಿವೆ. ಆಸಕ್ತರು ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ
78926 99162
84317 68679

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರ 30x40 ಅಳತೆಯ 3 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೊ. 82178-52518

**ಬೇಕಾಗಿದ್ದಾರೆ**
1) ರಿಸೆಪ್ಷನಿಸ್ಟ್, 2) OT ಟೆಕ್ನಿಷಿಯನ್, 3) ಟ್ರೈನ್ಡ್ ನರ್ಸ್, 4) ಸ್ಟಾಫ್ ನರ್ಸ್, 5) ಆಯಾ, 6) ವಾಚ್‌ಮನ್
(ಹಗಲು-ರಾತ್ರಿ ಡ್ಯೂಟಿ), ಸಂಪರ್ಕಿಸಿ
98808 53626

**ಲೀಸ್ 12 ಲಕ್ಷ/ಬಾಡಿಗೆ 13,000**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಅಮರಾವತಿ ಹಾಲಪ್ಪ
98454 84076

**ಕುಟುಂಬದ ಆಸ್ತಿ ಭಾಗಕ್ಕೆ**
ನಿಮ್ಮ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳಿಂದ ನಿಮಗೆ ಬರಬೇಕಾದ ಭಾಗದ ಬಗ್ಗೆ ಪಡೆಯಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196


**ಎನ್.ಎ. ನಾಗರಾಜ್ ನಿಧನ**



ದಾವಣಗೆರೆ ಕಾಯಿಪೇಟೆ ಶ್ರೀ ಪಾತಾಳಲಿಂಗೇಶ್ವರ ದೇವಸ್ಥಾನದ ಪಕ್ಕದ ವಾಸಿ ಎನ್.ವಿ ಅಂದಾನಪ್ಪ ಪಲ್ಲೇದ ಇವರ ಪುತ್ರ ಎನ್.ಎ. ನಾಗರಾಜ್ (27) ಅವರು ದಿನಾಂಕ 18.08.2021ರಂದು ಬುಧವಾರ ಮಧ್ಯಾಹ್ನ 2.10ಕ್ಕೆ ನಿಧನರಾಗಿದ್ದಾರೆ. ತಂದೆ, ತಾಯಿ ಸಹೋದರ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.08.2021ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಶ್ರೀಮತಿ ಶಾಂತಮ್ಮ ನಿಧನ**



ದಾವಣಗೆರೆ ಚಿಕ್ಕಮ್ಮಣಿ ಲೇಔಟ್ ಹತ್ತಿರದ ವಾಸಿ ದಿ. ಹುಲಿಕಟ್ಟೆ ಶರಣಪ್ಪ ಇವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ (70) ಅವರು ದಿನಾಂಕ 18.08.2021 ರಂದು ಬುಧವಾರ ಸಂಜೆ 7.45ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.08.2021ರ ಗುರುವಾರ ಬೆಳಗ್ಗೆ 10 ಗಂಟೆಗೆ ನಗರದ ಎಸ್.ಎಸ್ ಹೈಟೆಕ್ ಆಸ್ಪತ್ರೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಲಿದೆ.


**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ ಸಂಪರ್ಕಿಸಿ :
81472 61158

**1 BHK House For Rent**
In K.B. Extension, (Vegetarians Only)
Contact :
63615 12585

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
Sales Boys, Sales Girls, Helpers
63631 97523

**ಬೇಕಾಗಿದ್ದಾರೆ**
ವಸತಿ ಗೃಹದಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ಸ್ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
63639-54459

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


**JOBS**
MCS ACADEMY
Training & Placement Cell
98444 92888

**ಹೆಸರು ಬದಲಾವಣೆ**
ನಾನು ಶಿಲ್ಪ ಅಮ್ಮನ್ನ ಕೋಂ ರೋಲ್ಸನ್ ಸಂದೀಪ್ ಕುಮಾರ್ ವಯಸ್ಸು, 38 ವರ್ಷ, # 3837, 18ನೇ ಕ್ರಾಸ್ ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ ವಾಸಿಯಾದ ನಾನು ನನ್ನ ಆಧಾರ ಕಾರ್ಡ್‌ನಲ್ಲಿ ಶಿಲ್ಪ ಅಮ್ಮನ್ನ ಎಂದಿದ್ದು ಡಿ.ಎಲ್‌ನಲ್ಲಿ ನನ್ನ ಹೆಸರು ಶಿಲ್ಪ ಆರ್. ಶೆಟ್ಟಿ ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿನಾಂಕ 18.08.2021 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಹೆಸರು ಶಿಲ್ಪ ಅಮ್ಮನ್ನ ಸರಿ ಎಂದು ಪ್ರಮಾಣೀಕರಿಸಿದ್ದೇನೆ.
ಸಹಿ : ಶಿಲ್ಪ ಅಮ್ಮನ್ನ (SHILPA AMANNA)

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**SSLC/PUC/ ಪಾಸ್/ಫೇಲ್ ಮುಂದೇನು**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ
ಕೇವಲ 6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು
ಸಂಪರ್ಕಿಸಿ: 86602 35013
ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ ವೇತನ: 6000+1000



**ಚಿರಸ್ಮರಣೆ**



ದಿ॥ ಶ್ರೀ ಕೆ.ಆರ್. ಪಾಂಡುರಂಗರಾವ್ ಗುಜ್ಜರ್

ನೀವು ನಮ್ಮನ್ನಗಲಿ ಒಂಬತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ : ಶ್ರೀಮತಿ ಮುಕ್ತಾಬಾಯಿ ಜಿ.ಪಿ. ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಕೆ.ಆರ್. ಪಾಂಡುರಂಗರಾವ್ ಅಂಡ್ ಕೋ
ಎಪಿಎಂಸಿ ಯಾರ್ಡ್, 'ಡಿ' ಬ್ಲಾಕ್, ದಾವಣಗೆರೆ - 3. ಮೊ: 94483-39383

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ : 18.08.2021ರ ಮಂಗಳವಾರ ನಿಧನರಾದ
ಶ್ರೀ ಗುರು ಸಿದ್ದೇಶ್ವರ ಸ್ವಾಮಿ ಗದ್ದುಗೆ ಸೇವಾ ಸಮಿತಿ ಅಧ್ಯಕ್ಷರಾದ
**ಬಸಾಪುರದ ನರಗನಹಳ್ಳಿ ಮಠದ ಗುರುಸಿದ್ದಯ್ಯ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಟ್ರಸ್ಟಿಗಳು, ಅಧ್ಯಕ್ಷರು ಮತ್ತು ಸದಸ್ಯರು
ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಬಸಾಪುರ.
ಶ್ರೀ ಗುರುಸಿದ್ದೇಶ್ವರ ಸ್ವಾಮಿ ಗದ್ದುಗೆ, ಸೇವಾ ಸಮಿತಿ
ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ, ಬಸಾಪುರ, ದಾವಣಗೆರೆ.

## 23 ರಂದು ನಗರದಲ್ಲಿ ಭೌತಿಕ ಚಿಕಿತ್ಸೆ

ದಾವಣಗೆರೆ, ಆ.18- ನಗರದ ಅಂಗವಿಕಲರ ಆಶಾಕಿರಣ ಟ್ರಸ್ಟ್ ಆಶ್ರಯದ ಅಂಗವಿಲರ ಆಶಾಕಿರಣ ಟ್ರಸ್ಟ್, ಭಾವೈಕ್ಯತಾ ವಸತಿಯುತ ವಿಶೇಷ ಶಾಲೆಯಲ್ಲಿ ಪಾರ್ಶ್ವವಾಯು (ಪ್ಯಾರಲಿಸಿಸ್) ತೊಂದರೆ, ಭೀತಿಕ ನ್ಯೂನತೆ ತೊಂದರೆಯುಳ್ಳವರು, ಬುದ್ಧಿ ಮಾಂದ್ಯ ಮಕ್ಕಳಿಗೆ ಇದೇ ದಿನಾಂಕ 23 ರಿಂದ ಭೌತಿಕ ಚಿಕಿತ್ಸೆ (ವ್ಯಾಯಾಮ ಚಿಕಿತ್ಸೆ), ಆಯಿಲ್ ಮಸಾಜನ್ನು ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುವುದು.

ನಾಗರಿಕರು ಈ ಚಿಕಿತ್ಸೆಯ ಸದುಪಯೋಗ ಪಡೆದುಕೊಳ್ಳಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-222822 ಮತ್ತು ಮೊ: 94802 15206.

# ಭಾವನಾತ್ಮಕವಾಗಿ ಜನರ ಗಮನ ಸೆಳೆದು ಅಧಿಕಾರ ನಡೆಸುತ್ತಿರುವ ಬಿಜೆಪಿ

### ಸ್ವಾತಂತ್ರ್ಯ ದಿನಾಚರಣೆ : ಜಗಳೂರಿನಲ್ಲಿ ಕಾಂಗ್ರೆಸ್‌ನಿಂದ ನಡೆದ ಪಥಸಂಚಲನ ಕಾರ್ಯಕ್ರಮದಲ್ಲಿ ಕಿಡಿಕಾರಿದ ಮಾಜಿ ಶಾಸಕ ಎಚ್.ಪಿ.ರಾಜೇಶ್

ಜಗಳೂರು, ಆ.18- ಪಟ್ಟಣದ ಕಾಂಗ್ರೆಸ್ ಭವನದಲ್ಲಿ 75 ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ರಾಷ್ಟ್ರ ಧ್ವಜ ಹಿಡಿದು ಪಥಸಂಚಲನ ನಡೆಸಿದರು.

ನಂತರ ಮಾತನಾಡಿದ ಮಾಜಿ ಶಾಸಕ ಎಚ್. ಪಿ.ರಾಜೇಶ್, ಅಂದು ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆದಂತೆ ಇಂದು ಮೋದಿ ಮತ್ತು ಅವರ ಸರ್ವಾಧಿಕಾರತ್ವ ಕಂಪನಿ ವಿರುದ್ಧ ಹೋರಾಟ ಮಾಡಿ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವಂತಹ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಕರೆ ನೀಡಿದರು.

ನೂರು ವರ್ಷ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವ ಮಾದರಿಯಲ್ಲಿ ದೇಶದ ಅಭಿವೃದ್ಧಿ ಹಾಗು ಬಡತನ, ನಿರುದ್ಯೋಗ ಮುಕ್ತ ದೇಶ ಮಾಡಲು ಕಾಂಗ್ರೆಸ್ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದು ಶ್ರಮಿಸಿದೆ. ಹಿಂದುಳಿದ, ದಲಿತ, ಅಲ್ಪಸಂಖ್ಯಾತರಿಗೆ ಹಲವು ಯೋಜನೆಗಳನ್ನು ಕೊಟ್ಟಿರುವ ಕೀರ್ತಿ ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ ಎಂದು ಬಣ್ಣಿಸಿದರು.

ಕಳೆದ ಏಳು ವರ್ಷಗಳಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ಬರೀ ಪೊಳ್ಳು ಭರವಸೆ ನೀಡಿ ಧರ್ಮ, ಸೈನಿಕರು, ಕೋಮುವಾದ, ಹೆಸರಿನಲ್ಲಿ ಭಾವನಾತ್ಮಕವಾಗಿ ಜನರ ಗಮನ ಸೆಳೆದು ಅಧಿಕಾರ ನಡೆಸುತಿದ್ದಾರೆ.

ದೇಶದಲ್ಲಿ ಬಡತನ, ಹಸಿವು, ನಿರುದ್ಯೋಗ, ಬೆಲೆ ಏರಿಕೆ ತಾಂಡವವಾಡುತ್ತಿವೆ. ಬಡವರು,



ಕಾರ್ಮಿಕರು, ಮಧ್ಯಮ ವರ್ಗದ ಕುಟುಂಬಗಳು ಬೀದಿಗೆ ಬಂದಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕೆಪಿಸಿಸಿ ಎಸ್ಟಿ ಘಟಕ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ದೇಶದ ಅಭಿವೃದ್ಧಿ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯವಿದೆ. ದೇಶದಲ್ಲಿ ಹಾಗು ರಾಜ್ಯದಲ್ಲಿ ಇರುವಂತಹ ಸುಳ್ಳಿನ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು. ಅದಕ್ಕಾಗಿ ಕಾರ್ಯಕರ್ತರು ನಮ್ಮ ಪಕ್ಷದ ತತ್ವ, ಸಿದ್ಧಾಂತ ಹಾಗು ಸಾಧನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ ಗೌಡ್ರು, ಮುಖಂಡರಾದ ಸಿ.ತಿಪ್ಪೇಸ್ವಾಮಿ, ಪಲ್ಲಾಗಟ್ಟೆ ಶೇಖರಪ್ಪ, ಪಟ್ಟಣ ಪಂಚಾಯಿತಿ ಸದಸ್ಯರಾದ ರವಿಕುಮಾರ್, ಮಂಜುನಾಥ್, ಶಕೀಲ್ ಅಹಮದ್, ಕೆಂಚಮ್ಮ, ಸಾವಿತ್ರಮ್ಮ, ಲಕ್ಷ್ಮಿಬಾಯಿ, ಎಸ್.ಬಿ.ಕುಬೇಂದ್ರಪ್ಪ, ಬಿ.ಲೋಕೇಶ್. ವೆಂಕಟೇಶ್, ತಿಪ್ಪೇಸ್ವಾಮಿ, ಅಹಮದ್ ಅಲಿ, ಪಿ.ರೇವಣ್ಣ, ಮುಂತಾದವರು ಇದ್ದರು.

# ಬಳ್ಳಾರಿ ಸಿದ್ದಮ್ಮನವರ ಮೊಮ್ಮಗ ಚಿಟ್ರಕಿ ಶಿವಕುಮಾರ್‌ಗೆ ಸನ್ಮಾನ

ದಾವಣಗೆರೆ, ಆ.18 - ನಗರದ ಕೆ.ಬಿ. ಬಡಾವಣೆಯ ಬಳ್ಳಾರಿ ಸಿದ್ದಮ್ಮ ಪಾರ್ಕ್‌ನಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದಿಂದ 75ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀಮತಿ ಮಂಜುಳ ಮಹೇಶ್ ಅವರ ನೇತೃತ್ವದಲ್ಲಿ ಬಳ್ಳಾರಿ ಸಿದ್ದಮ್ಮ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿದರು.



ರಾಜ್ಯ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್ ಮಾತನಾಡಿ, ದಾವಣಗೆರೆಗೆ ಹೆಸರು ತಂದುಕೊಟ್ಟ ದಿಟ್ಟ ಧೀರ ಮಹಿಳೆ ಸ್ವಾತಂತ್ರ್ಯ ಹೋರಾಟಗಾರ್ತಿ, ಪ್ರಥಮ ಮಹಿಳಾ ಶಾಸಕಿ ದಿ. ಬಳ್ಳಾರಿ ಸಿದ್ದಮ್ಮನವರು ಮಹಿಳೆಯಾಗಿ ಮಾಡಿರುವ ಸಾಧನೆ ಅಪಾರ. ಅವರು ಸಮಾಜಕ್ಕೆ ಒಂದು ಮಾದರಿ ಹೆಣ್ಣು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ದಿ.ಬಳ್ಳಾರಿ ಸಿದ್ದಮ್ಮನವರ ಮೊಮ್ಮಗ, ಚಿಟ್ರಕಿ ಶಿವಕುಮಾರ್ ವಚನಗಳನ್ನು ಹಾಡಿದರು. ಶಿವಕುಮಾರ್ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಎಸ್. ಜಗದೀಶ್, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶ್ರೀಮತಿ ಪ್ರಮೀಳ ನಲ್ಲೂರು, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಪುಷ್ಪ ವಾಲಿ, ಶ್ರೀಮತಿ ಭಾಗ್ಯ ಪಿಸಾಳೆ, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ರೂಪ ಕಾಟ್ವೆ, ಉತ್ತರ ಮಂಡಲದ ಅಧ್ಯಕ್ಷೆ ಶ್ರೀಮತಿ ಸರ್ವಮಂಗಳ, ದಕ್ಷಿಣ ಮಹಿಳಾ ಮಂಡಲದ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ, ಉತ್ತರ ಮಂಡಲದ ಅಧ್ಯಕ್ಷರಾದ ಸಂಗನಗೌಡ್ರು, ಮಾಯಕೊಂಡ ಮಂಡಲದ ಅಧ್ಯಕ್ಷ ದೇವೇಂದ್ರಪ್ಪ ಶ್ಯಾಗಲೆ, ಪದಾಧಿಕಾರಿಗಳಾದ ಚಂದ್ರಿಕ, ರೂಪ, ಮಂಜುಳ, ಮಂಗಳ, ಸರಸ್ವತಿ, ಚಲತಾ, ಶ್ವೇತಾ, ಸೌಮ್ಯ, ಕುಮಾರಿ, ಲಕ್ಷ್ಮಿ, ಸರಸ್ವತಿ, ಮಂಜುಳ ಬಿ. ವಿಜಯಲಕ್ಷ್ಮಿ, ವೀಣಾ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

## ಇನ್ನರ್‌ವ್ಹೀಲ್‌ನಿಂದ ಸ್ವಾತಂತ್ರ್ಯೋತ್ಸವ



ದಾವಣಗೆರೆ, ಆ.18- ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷರಾದ ಶ್ರೀಮತಿ ಗಿರಿಜಾ ಬಿಲ್ಲಳ್ಳಿ ಹಾಗೂ ರೋಟರಿ ಕ್ಲಬ್ ಅಧ್ಯಕ್ಷ ಆಂಜನೇಯಮೂರ್ತಿ ಅವರುಗಳ ನೇತೃತ್ವದಲ್ಲಿ 75 ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಮಾಜಿ ಯೋಧರನ್ನು ಸನ್ಮಾನಿಸುವ ಜೊತೆಗೆ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಇನ್ನರ್‌ವ್ಹೀಲ್ ಕಾರ್ಯದರ್ಶಿ ಶ್ರೀಮತಿ ರತ್ನ ಪಾಟೀಲ್, ರೋಟರಿ ಕಾರ್ಯದರ್ಶಿ ದಯಾನಂದ್, ಇನ್ನರ್‌ವ್ಹೀಲ್ ಕ್ಲಬ್ ಹಿರಿಯ ಸದಸ್ಯರಾದ ನಿರ್ಮಲಾ ಮಹೇಶ್ವರಪ್ಪ, ನಾಗೇಂದ್ರಮ್ಮ ಪರಮೇಶ್ವರಪ್ಪ ಸೇರಿದಂತೆ ಇತರೆ ಸದಸ್ಯರು ಉಪಸ್ಥಿತರಿದ್ದರು.

# ನೀರು ಆಹಾರವಿಲ್ಲದೆ ಜೀವಿಸಬಹುದು, ಆಮ್ಲಜನಕವಿಲ್ಲದೆ ಬದುಕಲು ಸಾಧ್ಯವಿಲ್ಲ

### ಎವಿಕೆ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಪಿ. ಕುಮಾರ್



ದಾವಣಗೆರೆ, ಆ.18- ನಗರದ ಎವಿಕೆ ಕಾಲೇಜಿನಲ್ಲಿ ಇಕೋ ಕ್ಲಬ್ ಕಾರ್ಯಕ್ರಮದ ಅಡಿಯಲ್ಲಿ 'ಉಸಿರಿಗಾಗಿ ಹಸಿರು', 'ಹಸಿರು ನಾಶಮಾಡಿರುವ ತಪ್ಪಿಗೆ ಗಿಡನೆಟ್ಟು ಬೆಳೆಸಿ' ಆಶಯದೊಂದಿಗೆ ಸಸಿ ನಡುವ ಕಾರ್ಯಕ್ರಮ ನಡೆಸಲಾಯಿತು.

ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರು, ಅಧ್ಯಾಪಕೇತರರು ಭಾಗವಹಿಸಿ ವಿವಿಧ ಸಸಿ ನೆಟ್ಟರು. ತಾವು ನೆಟ್ಟ ಸಸಿಯನ್ನು ತಾವೇ ನೀರು-ಗೊಬ್ಬರ ಹಾಕಿ ಸಾಕುವುದಾಗಿ ದತ್ತು ತೆಗೆದುಕೊಳ್ಳಲು ಪ್ರಾಚಾರ್ಯ ಡಾ. ಬಿ.ಪಿ. ಕುಮಾರ್ ಕೋರಿದರು. ಅದರಂತೆ ಎಲ್ಲರೂ ಕೋರಿಕೆ ಸ್ವೀಕರಿಸಿ ಸಸಿಗಳನ್ನು ಪೋಷಿಸುವುದಾಗಿ ಘೋಷಿಸಿದರು.

ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಮಾತನಾಡಿ, ನೀರು ಆಹಾರವಿಲ್ಲದೆ ಹಲವು ದಿನ ಮಾನವ ಜೀವಿಸಬಹುದು, ಆಮ್ಲಜನಕವಿಲ್ಲದೇ ಒಂದು ಕ್ಷಣವೂ ಬದುಕಲು ಸಾಧ್ಯವಿಲ್ಲ. ಈ ಸತ್ಯವನ್ನು ಕೊರೊನಾ 2ನೇ ಅಲೆ ನೆನಪಿಸಿದ್ದು ಇತಿಹಾಸ. ಆದ್ದರಿಂದ ಗಿಡಗಳನ್ನು ಬೆಳೆಸಿ ಪರಿಸರ ಸಂರಕ್ಷಣೆ ಮಾಡಿದಲ್ಲಿ ಅಂತಹ ಪರಿಸ್ಥಿತಿ ಎದುರಾಗದು ಎಂದು ತಿಳಿಸಿದರು. ಎನ್.ಎಸ್.ಎಸ್. ಶಿಬಿರಾಧಿಕಾರಿಗಳಾದ ಪ್ರಭಾವತಿ ಎಸ್.ಹೊರಡಿ, ನ್ಯಾಕ್ ಸಂಯೋಜನಾ ಧಿಕಾರಿಗಳಾದ ಶ್ರೀಮತಿ ಜಿ.ಸಿ. ನೀಲಾಂಬಿಕ, ಆಂತರಿಕ ಗುಣಮಟ್ಟದ ವಿಭಾಗದ ಸಂಯೋಜನಾಧಿಕಾರಿಯಾದ ಆರ್.ಆರ್. ಶಿವಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಬಿಐಇಟಿಯಲ್ಲಿ ಕ್ಯಾಂಪಸ್ 15 ವಿದ್ಯಾರ್ಥಿಗಳ ಆಯ್ಕೆ

ದಾವಣಗೆರೆ, ಆ.18- ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ವಿದ್ಯಾರ್ಥಿಗಳಿಗೆ ಎಸ್‌ಎಲ್‌ಕೆ ಸಾಫ್ಟ್‌ವೇರ್ (ಬೆಂಗಳೂರು) ಆನ್‌ಲೈನ್ ಡ್ರೈವ್ ನಡೆಸಿತು. ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್, ಮಾಹಿತಿ ವಿಜ್ಞಾನ ಮತ್ತು ಎಂಸಿಎ ವಿದ್ಯಾರ್ಥಿಗಳಿಗೆ ಚಾಲನೆ ನೀಡಲಾಯಿತು.

15 ವಿದ್ಯಾರ್ಥಿಗಳು ಈ ಡ್ರೈವ್‌ನಲ್ಲಿ ಆಯ್ಕೆಯಾಗಿದ್ದಾರೆ ಎಂದು ಡೀನ್-ಟ್ರೈನಿಂಗ್ ಮತ್ತು ಪ್ಲೇಸ್‌ಮೆಂಟ್ ಸೆಲ್‌ನ ಡಾ. ಎಂ.ಎಸ್. ನಾಗರಾಜ್ ತಿಳಿಸಿದ್ದಾರೆ.

ಈ ನೇಮಕಾತಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಕಾಲೇಜಿನ ನಿರ್ದೇಶಕ ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಅವರು ಅಭಿನಂದಿಸಿದ್ದಾರೆ.

## ಸಿ.ಆರ್.ಸಿ. ಸೌಲಭ್ಯಕ್ಕೆ ಕ್ರಮ

- ✦ ಪರಿಶಿಷ್ಟ ಜಾತಿ - ಪಂಗಡದ ಐಎಎಸ್ ಅಧಿಕಾರಿಗಳ ಸಂಖ್ಯೆ ಹೆಚ್ಚಿಸಲು ತರಬೇತಿ
- ✦ ಎಸ್‌ಸಿ - ಎಸ್ಟಿ ನಿಗಮಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಹಣಕಾಸು
- ✦ ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆ ಎಂದು ಪರಿಗಣನೆ
- ✦ ಪರಿಣಿತರ ಸಮಿತಿ ವರದಿಯಂತೆ ದೇಶಾದ್ಯಂತ ಜಾತಿ ಗಣತಿ
- ✦ ಎಲ್ಲಾ 84 ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಅಂಬೇಡ್ಕರ್ ನವೋದಯ ಶಾಲೆ
- ✦ ಸದಾಶಿವ ಆಯೋಗದ ವರದಿ ಜಾರಿಗೆ ಬದ್ಧ

(1ನೇ ಪುಟದಿಂದ) ಪರೀಕ್ಷೆ ಸೇರಿದಂತೆ ಬ್ಯಾಂಕಿಂಗ್ ಮತ್ತಿತರೆ ಪರೀಕ್ಷೆಗಳಿಗಾಗಿ ಪ್ರತಿಭಾವಂತ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ತರಬೇತಿ ನೀಡಲಾಗುವುದು ಎಂದವರು ತಿಳಿಸಿದರು.

ಪರಿಶಿಷ್ಟ ಜಾತಿ ಹಾಗೂ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ನಿಗಮಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ಸೌಲಭ್ಯ ಕಲ್ಪಿಸಲಾಗುವುದು. ಪರಿಶಿಷ್ಟ ವಿದ್ಯಾರ್ಥಿಗಳ ತಾಂತ್ರಿಕ ಶಿಕ್ಷಣದ ಎಲ್ಲ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸಲಿದೆ ಎಂದು ಸಚಿವರು ಹೇಳಿದರು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿ ಸುವ ಕ್ರಮ ಸನಿಹದಲ್ಲಿದೆ. ಶೀಘ್ರದಲ್ಲೇ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ತೆಗೆದು ಕೊಳ್ಳಲಿದೆ ಎಂದು ನಾರಾಯಣಸ್ವಾಮಿ ಹೇಳಿದರು.

ದೇಶಾದ್ಯಂತ ಜಾತಿ ಗಣತಿ ನಡೆಸುವಲ್ಲಿ ಹಲವಾರು ತೊಡಕುಗಳಿವೆ. ಈ ಬಗ್ಗೆ ಕೇಂದ್ರ ಸರ್ಕಾರ ಪರಿಣಿತರ ಸಮಿತಿಯೊಂದನ್ನು ರಚಿಸಿದೆ. ಸಮಿತಿಯ ವರದಿಯಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ದೇಶದ ಎಲ್ಲಾ 84 ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಒಂದೊಂದು ಅಂಬೇಡ್ಕರ್ ನವೋದಯ ಶಾಲೆಗಳನ್ನು ತೆರೆಯಲಾಗುವುದು ಎಂದು ಸಚಿವರು ಹೇಳಿದರು. ಸದಾಶಿವ ಆಯೋಗದ ವರದಿ ಜಾರಿಗೆ ಈಗಲೂ ನಾನು ಬದ್ಧವಾಗಿದ್ದೇನೆ. ಸ್ವಾಮೀಜಿಗಳು ಹಾಗೂ ರಾಜಕೀಯ ಮುಖಂಡರ ಜೊತೆ ಮಾತನಾಡಿದ್ದೇನೆ. ಎಲ್ಲರ ಹೃದಯ ಗೆದ್ದು ಯೋಜನೆ ಜಾರಿಯಾಗುವಂತೆ ಮಾಡಲು ಶ್ರಮಿಸುತ್ತೇನೆ ಎಂದರು.

ಕೇಂದ್ರ ಸರ್ಕಾರದ ವೃದ್ಧಾಶ್ರಮಗಳು ಹಾಗೂ ಡಿ - ಅಡಿಕ್ಷನ್ ಕೇಂದ್ರಗಳಲ್ಲಿ ಅಕ್ರಮ ನಡೆಯುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈ ಕೇಂದ್ರಗಳ ನೋಂದಣಿ ಹಾಗೂ ಹಾಜರಾತಿ ಆನ್‌ಲೈನ್ ಮಾಡಲಾಗಿದೆ. ಸಿಸಿಟಿವಿ ಕಡ್ಡಾಯಗೊಳಿಸಿ ದೆಹಲಿಯಿಂದಲೇ ನಿಗಾ ವಹಿಸಲಾಗುತ್ತಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

## ಮಹಿಳಾ ಕಾಂಗ್ರೆಸ್‌ನಿಂದ 'ಶ್ರಾವಣ ಸಂಭ್ರಮ'



ಹರಪನಹಳ್ಳಿ, ಆ.18- ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಹಿಳಾ ಕಾಂಗ್ರೆಸ್ ಘಟಕದಿಂದ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಸಾರಥ್ಯದಲ್ಲಿ ಶ್ರಾವಣ ಮಾಸದ ಅಂಗವಾಗಿ ಪ್ರತಿ ಮನೆ - ಮನೆಗೂ 'ತವರಿನ ಉಡುಗೊರೆ' ಹೆಸರಿನಲ್ಲಿ 'ಅರಿಷಿಣ, ಕುಂಕುಮ, ಬಳೆ, ಉಂಡಿ' ವಿತರಿಸುವ ಮೂಲಕ 'ಶ್ರಾವಣ ಸಂಭ್ರಮ' ಮನೆ ಮಾಡಿದೆ.

ಪಟ್ಟಣದ ವಿವಿಧ ಬಡಾವಣೆಗಳಲ್ಲಿ 'ತವರಿನ ಉಡುಗೊರೆ' ನೀಡುವ ಮೂಲಕ ಲತಾ ಮಲ್ಲಿಕಾರ್ಜುನ್ ಅವರು ಭಾವನಾತ್ಮಕ ಸಂಬಂಧಗಳನ್ನು ಗಟ್ಟಿಗೊಳಿಸಿದರು. ಪಟ್ಟಣದ ಜನರಿಗೆ ಹೊಸ ಅನುಭವ ಕೊಟ್ಟ ಶ್ರಾವಣ ಸಂಭ್ರಮ ಎಲ್ಲರಲ್ಲಿ ಸಂಭ್ರಮ, ಸಡಗರ ತಂದಿದೆ.

ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಪುಷ್ಪಾ ದಿವಾಕರ್, ತಾ.ಪಂ. ಮಾಜಿ ಸದಸ್ಯೆ ಕಂಚಿಕೇರಿ ಜಯಲಕ್ಷ್ಮಿ, ನಂದಿಬೇವೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಗೊಂಗಡಿ ಸಹನಾ ನಾಗರಾಜ್, ಕಡಬಗೆರೆ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಅನುಷಾ ಮಂಜುನಾಥ್, ಮಹೇಶ್ವರಿ ಬಸವರಾಜಯ್ಯ, ಸುಮ ಜಗದೀಶ್, ನೇತ್ರಾವತಿ, ಉಮಾ ಶಂಕರ್, ಪುರಸಭೆ ಮಾಜಿ ಸದಸ್ಯೆ ಕವಿತಾ ಸುರೇಶ್, ರವಿ ಯುವ ಶಕ್ತಿ ಪಡೆ ಅಧ್ಯಕ್ಷ ಉದಯಶಂಕರ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್, ಮತ್ತೂರು ಲಿಂಗರಾಜ್ ಇನ್ನಿತರರಿದ್ದರು.

## ಅಂಧಮಕ್ಕಳಿಗೆ ಅಗತ್ಯ ಸಾಮಗ್ರಿಗಳ ವಿತರಣೆ

ಮಲೇಬೆನ್ನೂರು, ಆ.18- ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹುಟ್ಟುಹಬ್ಬದ ಅಂಗವಾಗಿ ಬಾಡಾ ಕ್ರಾಸ್ ಬಳಿ ಇರುವ ವೀರೇಶ್ವರ ಪುಣ್ಯಾಶ್ರಮದಲ್ಲಿ ಅಂಧ ಮಕ್ಕಳಿಗೆ ಕಮಲಾಪುರ ಗ್ರಾಮದ ವಿದ್ಯಾರ್ಥಿ ಶಂಕರಮೂರ್ತಿ ಅಗತ್ಯವಿರುವ ಸಾಮಗ್ರಿಗಳು ಹಾಗೂ ಸಿಹಿ ವಿತರಿಸಿದರು.




### ಜಿ.ಪಂ. ಸದಸ್ಯ, ವೀರಶೈವ ಸಮಾಜದ ಮುಖಂಡ

## ಡಾ. ಮಂಜುನಾಥ್ ಉತ್ತಂಗಿ ನಿಧನ



ಹರಪನಹಳ್ಳಿ, ಆ.18- ಜಿಲ್ಲಾ ಪಂಚಾಯ್ತಿ ಸದಸ್ಯ ಹಾಗೂ ವೀರಶೈವ ಸಮಾಜದ ಮುಖಂಡ ಡಾ. ಮಂಜುನಾಥ್ ಉತ್ತಂಗಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಚಿಗಟೇರಿ ಗ್ರಾಮದವರಾದ ಮಂಜುನಾಥ್, ಮಾಜಿ ಉಪ ಮುಖ್ಯಮಂತ್ರಿ ದಿ. ಎಂ.ಪಿ. ಪ್ರಕಾಶ್ ಅವರ ಒಡನಾಡಿಯಾಗಿದ್ದು, ವೃತ್ತಿಯಲ್ಲಿ ವೈದ್ಯರಾಗಿ ಗ್ರಾಮೀಣ ಭಾಗದ ಜನರ ಸೇವೆಯಲ್ಲಿ ತೊಡಗಿದ್ದರು. ಜೊತೆಗೆ ತಾಲ್ಲೂಕು ರಾಜಕಾರಣದಲ್ಲಿಯೂ ಸಕ್ರಿಯರಾಗಿದ್ದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

**ಸಂತಾಪ:** ವೈದ್ಯರಾದ ಡಾ. ಮಲ್ಲಪ್ಪ ಅಧಿಕಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಕಾನಹಳ್ಳಿ ರುದ್ರಪ್ಪ, ವಕೀಲರ ಸಂಘದ ಅಧ್ಯಕ್ಷ ಕೆ.ಚಂದ್ರೇಗೌಡ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ವಕೀಲರಾದ ಮತ್ತಿಹಳ್ಳಿ ಅಜ್ಜಣ್ಣ, ಶಶಿಧರ ಪೂಜಾರ್, ಎಂ.ಬಿ. ಯಶವಂತಗೌಡ, ಕಸಾಪ ಮಾಜಿ ಅಧ್ಯಕ್ಷ ಬಿ. ರಾಮಪ್ರಸಾದ್ ಗಾಂಧಿ, ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಡಿ. ಅಬ್ದುಲ್ ರಹಿಮಾನ್ ಸಾಬ್, ಗೊಂಗಡಿ ನಾಗರಾಜ್, ಗಣೇಶ, ಮುಖಂಡರಾದ ಕಟ್ಟಿ ಆನಂದಪ್ಪ, ವೇಣುಗೋಪಾಲ, ಆರುಂಡಿ ಸುರೇಶ್, ಎಸ್.ಆರ್. ತಿಮ್ಮಣ್ಣ, ಜಗದೀಶ ಗೌಡ, ವಾಗೀಶಗೌಡ, ಶಫಿ, ಶಬ್ಬೀರ್ ಇನ್ನಿತರರು ಸಂತಾಪ ಸೂಚಿಸಿದ್ದಾರೆ.

## ನಗರದಲ್ಲಿ ಇಂದು ನಾಟಕೋತ್ಸವ

ಶ್ರೀ ಗುರು ವಾದ್ಯ ವೃಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಕೆ.ಬಿ. ಆರ್ ಡ್ರಾಮಾ ಕಂಪನಿ ಇವರ ಸಹಯೋಗದೊಂದಿಗೆ ನಾಟಕ ಪ್ರದರ್ಶನವು ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಇಂದು ಸಂಜೆ 6.30 ಕ್ಕೆ ನಡೆಯಲಿದೆ.

ಶ್ರೀ ಬಸವ ಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಸಮಾರಂಭದ ಉದ್ಘಾಟನೆಯನ್ನು ಶಾಸಕ ಎಸ್.ಎ. ರವೀಂದ್ರನಾಥ್ ನೆರವೇರಿಸುವರು. ಅಧ್ಯಕ್ಷತೆಯನ್ನು ಮಂಜುನಾಥ ಕುರ್ಕಿ ವಹಿಸುವರು. ವಿಶೇಷ ಆಹ್ವಾನಿತರಾಗಿ ಕೆ.ಬಿ. ರಾಮಚಂದ್ರಪ್ಪ, ವೀರಭದ್ರಯ್ಯ ಆಗಮಿಸುವರು.

ರವಿಚಂದ್ರ, ಪರಶುರಾಮಪ್ಪ, ದಿನೇಶ್ ಶೆಟ್ಟಿ, ರಾಜೀವ್ ಅತಿಥಿಗಳಾಗಿದ್ದಾರೆ. ಪ್ರಸ್ತಾವಿಕವಾಗಿ ಚಿಂದೋಡಿ ಶಂಭುಲಿಂಗಪ್ಪ ಮಾತನಾಡುವರು

# ಇಂದು 'ವಿಶ್ವ ಛಾಯಾಗ್ರಹಣ ದಿನಾಚರಣೆ'

1289ರ ಸುಮಾರಿಗೆ ಕಲಾವಿದರುಗಳಾದ ರೋಗರ್ ಬ್ಯಾಕೋನ್, ಲಿಯಾನಾರ್ಡೊ ಡಾ ವಿಂಚಿ, ಅಲ್ಬರ್ಟ್ ಮೊದಲಾದವರು ದೃಶ್ಯ ಚಿತ್ರಗಳನ್ನು ರಚಿಸಲು ಪ್ಲೇವುಡ್‌ನ ಕತ್ತಲು ಕೋಣೆಯೊಂದನ್ನು ಮಾಡಿ ಅದರ ಒಂದು ಪಾರ್ಶ್ವದಲ್ಲಿ ಕಿರು ರಂಧ್ರ ಮಾಡಿ ಅದರಿಂದ ಪ್ರತಿಫಲನವಾಗುವ ಅಸ್ಪಷ್ಟ ಚಿತ್ರ (ಕ್ಯಾನ್‌ವಾಸ್ ಮೇಲೆ) ವನ್ನು ಚಾರ್‌ಕೋಲ್‌ನಿಂದ ಕೀ ಸ್ಕೆಚ್ ಮಾಡಿಕೊಂಡು ಪೇಟಿಂಗ್ ರಚಿಸುತ್ತಿದ್ದರು. 'ಕ್ಯಾಮರಾ' ಎಂದರೆ 'ಕತ್ತಲು', 'ಅಬ್‌ಸ್ಕುರಾ' ಎಂದರೆ ಕೋಣೆ, ಹೀಗೆ 'ಕ್ಯಾಮರಾ ಅಬ್‌ಸ್ಕುರಾ' ಬಂದದ್ದಕ್ಕೆ ಸುಮಾರು 1550ರ ಹೊತ್ತಿಗೆ 'ಗಾರ್ಡಾನೋ' ಎಂಬುವವ 'ಬೈಕಾನ್‌ವೆಕ್ಸ್ ಲೆನ್ಸ್' ಕೂರಿಸಿ ಚಿತ್ರ ಸ್ಪಷ್ಟವಾಗುವಂತೆ ಮಾಡಿದ. ಈ ಕ್ಯಾಮರಾ ಅಬ್‌ಸ್ಕುರಾ ವೇ ಪರಿಷ್ಕರಣೆಗೊಳ್ಳುತ್ತಾ 'ಕ್ಯಾಮರಾ' ಆಯಿತು.



1826ರ ವೇಳೆಗೆ ಇದನ್ನು ಸಂಶೋಧಕ ನೈಸ್ ಪೋರ್ ನಿಪ್ಸೆ, 'ಫೋಟೋಗ್ರಫಿ'ಗೆ ಅಳವಡಿಸಿದ. 'ಫೋಟೋ' ಅಂದರೆ 'ಬೆಳಕು', 'ಗ್ರಫಿ' ಎಂದರೆ 'ಚಿತ್ರ'. ಹೀಗೆ ಮೂಡಿದ ಚಿತ್ರಗಳು 'ಸ್ಥಿರ'ವಾಗುವಂತೆ ಮಾಡಿದ ರಾಸಾಯನಿಕ ಪ್ರಯೋಗಗಳಲ್ಲಿ ನೈಸ್‌ಫೋರ್ ನಿಪ್ಸೆ ಮತ್ತು 'ಡಾಗರೆ'ಯವರ ಸೂತ್ರವು ಫ್ರಾನ್ಸ್‌ನ ವಿಜ್ಞಾನ ಅಕಾಡೆಮಿಯಲ್ಲಿ ಮಾನ್ಯತೆ ಪಡೆಯಿತು. ಅದನ್ನು 1839 ಆಗಸ್ಟ್ 19 ರಂದು ವಿಶ್ವಕ್ಕೆ ಸಮರ್ಪಿಸಲಾಯಿತು. ಇದೇ ದಿನವನ್ನೇ 'ವಿಶ್ವ ಛಾಯಾಗ್ರಹಣ ದಿನ' ಎಂದು ಆಚರಿಸಲಾಗುತ್ತಿದೆ.

ಫೋಟೋಗ್ರಫಿಯಿಂದಾಗಿಯೇ ಸಿನಿಮಾಟೋಗ್ರಫಿ ಹುಟ್ಟಿತು. ಟೆಲಿವಿಷನ್ ಆವಿಷ್ಕಾರಕ್ಕೂ ಫೋಟೋಗ್ರಫಿ ಹಾಗೂ ಕ್ಯಾಮರಾ ಪ್ರೇರಣೆಯಾಯಿತು. ಎಕ್ಸ್‌ರೇ ಮುಂತಾದವಕ್ಕೂ ಫೋಟೋಗ್ರಫಿ ತಂತ್ರಜ್ಞಾನ ಸಹಾಯಕವಾಯಿತು. ತಯಾರಿಸುವಲ್ಲೂ, ಪತ್ರಿಕಾ ಮುದ್ರಣ ರಂಗದಲ್ಲೂ ಫೋಟೋಗ್ರಫಿ ತಂತ್ರಜ್ಞಾನದ ಪಾತ್ರವಿದೆ. ಬಾಹ್ಯಾಕಾಶ ಉಪಗ್ರಹಗಳಲ್ಲೂ 'ಕ್ಯಾಮರಾಗಳ' ಪಾತ್ರ ಮಹತ್ವದ್ದಾಗಿದೆ. ವಿಶ್ವ ಛಾಯಾಗ್ರಹಣ ದಿನಾಚರಣೆ ಕೇವಲ ಛಾಯಾಗ್ರಾಹರಿಕಷ್ಟೇ ಅಲ್ಲ, ಪ್ರಪಂಚದ ಎಲ್ಲಾ ಕ್ಷೇತ್ರಗಳೂ ಆಚರಿಸಬೇಕಾದ್ದು.

### ದಾವಣಗೆರೆಯಲ್ಲಿ ಛಾಯಾಗ್ರಹಣ

ಫೋಟೋಗ್ರಫಿಗೆ ಸಂಬಂಧಿಸಿ ಹೇಳುವುದಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು 1926ನೇ ಇಸವಿ ವೇಳೆಗೆ ದಾವಣಗೆರೆಯಲ್ಲಿ ಮೊಟ್ಟ ಮೊದಲ ಫೋಟೋ ಸ್ಟುಡಿಯೋ 'ಫೈನ್ ಆರ್ಟ್ ಸ್ಟುಡಿಯೋ'ವನ್ನು ಸ್ಥಾಪಿಸಿದವರು ನಮ್ಮ ತಂದೆ ದಿ. ಹೆಚ್.ಭುಜಂಗರಾಯ ಶಾಸ್ತ್ರಿಯವರು.

ಸುಮಾರು 81 ವರ್ಷಗಳ ಕಾಲ ನಮ್ಮ 'ಫೈನ್ ಆರ್ಟ್ ಸ್ಟುಡಿಯೋ' ಚೌಕಿಪೇಟೆಯಲ್ಲಿತ್ತು. ನಮ್ಮ ಫೋಟೋ ಸ್ಟುಡಿಯೋ ಸ್ಥಾಪಿಸುವಾಗ ದಾವಣಗೆರೆಯ ದುರ್ಗಾಂಬಿಕಾ ದೇವಿ ಗುಡಿಯ ಸಮೀಪ ರಾಘವಾಂಕ ಮಠದ ಚನ್ನಬಸಯ್ಯನವರೂ ಫೋಟೋ ತೆಗೆಯುತ್ತಿದ್ದರು. ಆದರೆ, ಸಂಸ್ಕರಣೆಗಾಗಿ ಮುಂಬಯಿಗೆ ಹೋಗಬೇಕಾಗಿತ್ತು. ನಮ್ಮ ತಂದೆಯವರು ಮೊಟ್ಟ ಮೊದಲ ಸ್ಟುಡಿಯೋ ಸ್ಥಾಪಿಸುವುದರೊಂದಿಗೆ 'ಸಂಸ್ಕರಣ'ವನ್ನು ದಾವಣಗೆರೆಯಲ್ಲೇ ಆರಂಭಿಸಿದರು. ಆಗ ದಾವಣಗೆರೆಯಲ್ಲಿ 'ವಿದ್ಯುಚ್ಛಕ್ತಿ' ಬಂದಿರಲಿಲ್ಲ. ರಾಣೇಬೆನ್ನೂರಿನಿಂದ ಜನರೇಟರ್ ತರಿಸಿ ವಿದ್ಯುತ್ ಪಡೆಯುತ್ತಿದ್ದರು. ವಿದ್ಯುಚ್ಛಕ್ತಿಯಿಂದ ಮೊದಲ 'ಓಪನ್ ಲೈಟ್' ಫೋಟೋಗ್ರಫಿ, 'ಪೆಟ್ರೋಮ್ಯಾಕ್ಸ್ ಪ್ರಿಂಟಿಂಗ್' ವಿಧಾನವಿತ್ತು. ವಿದ್ಯುಚ್ಛಕ್ತಿ ಬಂದ ಮೇಲೆ 'ಎಲೆಕ್ಟ್ರಿಕ್ ಸ್ಟುಡಿಯೋ'ಗಳಾದವು. ನಮ್ಮ ತಂದೆಯವರಿಂದ ಫೋಟೋಗ್ರಫಿ ಕಲಿತುಕೊಂಡ ನಮ್ಮ ತಾಯಿ ಕೀರ್ತಿಶೇಷ ಹೆಚ್.ಬಿ.ಲಕ್ಷ್ಮಿ ದೇವಮ್ಮನವರು 1950ನೇ ಇಸವಿಯಲ್ಲೇ ಪ್ರಥಮ ಮಹಿಳಾ ಛಾಯಾಗ್ರಾಹಕರಾದರು. ಡಿಜಿಟಲ್ ತಂತ್ರಜ್ಞಾನ ಬಂದ ಮೇಲೆ ಫೋಟೋಗ್ರಫಿಯು ಹಿಂದಿನಷ್ಟು ಕ್ಲಿಷ್ಟಕರವಾಗಿಲ್ಲ.

- ಹೆಚ್.ಬಿ.ಮಂಜುನಾಥ, ಹಿರಿಯ ಪತ್ರಕರ್ತರು

## ಇಂದು ವಿಶ್ವ ಛಾಯಾಗ್ರಹಣ ದಿನಾಚರಣೆ

ಜಿಲ್ಲಾ ಛಾಯಾಗ್ರಾಹಕರ ಸಂಘ ಹಾಗೂ ಜಿಲ್ಲಾ ಅಖಿಲ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘದ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ರೋಟರಿ ಬಾಲಭವನದಲ್ಲಿ 182 ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಸಾನ್ನಿಧ್ಯ : ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ. ಗುರುತಿನ ಚೀಟಿ ವಿತರಣೆ : ಡಾ. ಶಾಮನೂರು ಶಿವಶಂಕರಪ್ಪ. ವಿಶೇಷ ಅತಿಥಿಗಳು : ಎಂ.ಪಿ. ರೇಣುಕಾಚಾರ್ಯ, ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್. ಅಧ್ಯಕ್ಷತೆ : ಬಿ. ಮಂಜುನಾಥ್. ಮುಖ್ಯ ಅತಿಥಿಗಳು : ಎಸ್.ಟಿ. ವೀರೇಶ್, ಆರ್.ಎನ್. ಪಾಟೀಲ್. ಸನ್ಮಾನ : ಎಸ್.ಎಲ್. ಆನಂದಪ್ಪ, ಲೋಕಿಕೆರೆ ನಾಗರಾಜ್ ಮತ್ತು ಕೊರೊನಾ ವಾರಿಯರ್ಸ್, ಯೋಧರು.

## ಕಡರನಾಯಕನಹಳ್ಳಿ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಉತ್ತಮ ಫಲಿತಾಂಶ

ಹರಿಹರ, ಆ.18- ತಾಲ್ಲೂಕಿನ ಕಡರನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಲಭಿಸಿದೆ. ವಿದ್ಯಾರ್ಥಿನಿಯರಾದ ಪಿ.ಕೆ. ತೇಜಸ್ವಿನಿ 602 (ಶೇ.96.32), ಎಂ.ವಿ. ವರ್ಷಿಣಿ 598 (ಶೇ.95.52) ಹಾಗೂ ಡಿ. ಅಂಜಲಿ 597 (ಶೇ.95.52) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನದಲ್ಲಿದ್ದಾರೆ.

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

ಚಾಮರಾಜಪೇಟೆ, ದಾವಣಗೆರೆ - 577 001.

96861 95327

# ವಾಲ್ಮೀಕಿ ಜಯಂತಿ ವೇಳೆಗೆ ಎಸ್ಟಿ ಮೀಸಲಾತಿ ಹೆಚ್ಚಿಸಿ

## ಸಿಎಂಗೆ ರಾಜನಹಳ್ಳಿ ಸ್ವಾಮೀಜಿ ಮನವಿ



ಬೆಂಗಳೂರು, ಆ.18- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಇಂದು ಭೇಟಿ ಮಾಡಿ, ಎಸ್ಟಿ ಮೀಸಲಾತಿ ಹೆಚ್ಚಳ ಕುರಿತು ಚರ್ಚಿಸಿತು.

ಬಹುವರ್ಷಗಳ ಬೇಡಿಕೆಯಾಗಿದ್ದ ಎಸ್ಟಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲು ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿಗಳನ್ನು ಎಸ್ಟಿ ಸಮುದಾಯದ ಪರವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅಭಿನಂದಿಸಿದರು.

ಎಸ್ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಬೇಕಾಗಿದ್ದು, ಈ ಕುರಿತು ಈಗಾಗಲೇ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದ ಆಯೋಗವು ವರದಿ ಸಲ್ಲಿಸಿ ವರ್ಷ ಕಳೆದಿದೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಮೀಸಲಾತಿ ಹೆಚ್ಚಳ ಮಾಡುವ ಬಗ್ಗೆ ವಾಲ್ಮೀಕಿ ಜಾತ್ರೆಯಲ್ಲಿ ಮಾತುಕೊಟ್ಟು ಬಂದಿದ್ದರು. ಆದಾದ ನಂತರ ನಾವು ಅವರನ್ನು ಮತ್ತು ನಿಮ್ಮನ್ನು ಭೇಟಿ ಮಾಡಿ, ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಇದುವರೆಗೂ ಆ ಕೆಲಸವಾಗಿಲ್ಲ. ಈಗ ನೀವು ಮುಖ್ಯಮಂತ್ರಿ ಆಗಿರುವುದು ನಮ್ಮ ಸಮಾಜದವರೇ ಮುಖ್ಯಮಂತ್ರಿ ಆದಷ್ಟು ಸಂತೋಷವಾಗಿದೆ. ಮೀಸಲಾತಿ ಹೆಚ್ಚಳ ವಿಷಯದ ಬಗ್ಗೆ ಮಾಹಿತಿ ನಿಮಗಿದ್ದು, ಬರುವ ವಾಲ್ಮೀಕಿ ಜಯಂತಿ ವೇಳೆಗೆ ಎಸ್ಟಿ ಮೀಸಲಾತಿ ಹೆಚ್ಚಳ ಮಾಡಬೇಕೆಂಬುದು ನಮ್ಮ ಮನವಿ ಮತ್ತು ಆಗ್ರಹವಾಗಿದೆ ಎಂದು ಸ್ವಾಮೀಜಿ ಅವರು ಬೊಮ್ಮಾಯಿ ಅವರಿಗೆ ಹೇಳಿದರು.

ಸಚಿವ ಶ್ರೀರಾಮುಲು, ಶಾಸಕರುಗಳಾದ ಸತೀಶ್ ಜಾರಕಿಹೊಳಿ, ಶಿವನಗೌಡ ನಾಯಕ, ಎಸ್.ವಿ.ರಾಮಚಂದ್ರ, ತುಕಾರಾಂ, ಅನಿಲ್ ಚಿಕ್ಕಮಾದು, ರಾಜಾ ವೆಂಕಟಪ್ಪ ನಾಯಕ ಅವರೂ ಕೂಡಾ ಮೀಸಲಾತಿ ಹೆಚ್ಚಳ ಮಾಡುವ ಬಗ್ಗೆ ಸಿಎಂ ಗಮನ ಸೆಳೆದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಮೀಸಲಾತಿ ಹೆಚ್ಚಳ ವಾಲ್ಮೀಕಿ ಸಮಾಜದ ಪ್ರಮುಖವಾದ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ. ಅದಕ್ಕಾಗಿ ಇನ್ನೂ ಸ್ವಲ್ಪ ಸಮಯಾವಕಾಶ ನೀಡಿ ಎಂದು ಸ್ವಾಮೀಜಿಯವರನ್ನು ಕೇಳಿಕೊಂಡರು. ನಾನು ಕೂಡಾ ನಿಮ್ಮವನಾಗಿ ಕೆಲಸ ಮಾಡಲು ಸಿದ್ದನೆಂದು ನಿಯೋಗಕ್ಕೆ ಭರವಸೆ ನೀಡಿದರು.

ಮುಖ್ಯಮಂತ್ರಿಗಳ ಮಾತಿನಿಂದ ಸಮಾಧಾನಗೊಂಡ ಸ್ವಾಮೀಜಿ, ನಿಮ್ಮ ಅವಧಿಯಲ್ಲೇ ಈ ಕೆಲಸ ಆಗಬೇಕೆಂದು ಮತ್ತೊಮ್ಮೆ ಮನವಿ ಮಾಡಿದರು. ಆಗ ಮುಖಮಂತ್ರಿಗಳು, ಸ್ವಾಮೀಜಿ ಜೊತೆ ಪ್ರತ್ಯೇಕವಾಗಿ ಮಾತನಾಡುವ ಇಂಗಿತ ವ್ಯಕ್ತಪಡಿಸಿ, ಸಮಯ ತಿಳಿಸುತ್ತೇನೆಂದು ಸಭೆಯನ್ನು ಮುಕ್ತಾಯ ಮಾಡಿದರು.

ಈ ವೇಳೆ ಸಭೆಯಲ್ಲಿದ್ದ ಸಮಾಜದ ಮುಖಂಡರು ವಾಲ್ಮೀಕಿ ಸಮಾಜಕ್ಕೆ ಇನ್ನೆರಡು ಸಚಿವ ಸ್ಥಾನ ನೀಡಿ ಎಂದು ಸಿಎಂ ಅವರನ್ನು ಒತ್ತಾಯಿಸಿದಾಗ ನೋಡೋಣ ಎಂಬ ಉತ್ತರವನ್ನು ಮಾತ್ರ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯರೂ ಆದ ವಾಲ್ಮೀಕಿ ಮಹಾಸಭಾದ ರಾಜ್ಯಾಧ್ಯಕ್ಷ ಜಿ.ಟಿ. ಚಂದ್ರಶೇಖರಪ್ಪ, ನಿವೃತ್ತ ಡಿಸಿ ಶಿವಪ್ಪ, ಕೆ. ಎಸ್.ಮೃತ್ಯುಂಜಯಪ್ಪ, ಸಾಹಿತಿ ಕೆಂಪನಹಳ್ಳಿ ಅನುಸೂಯ, ಚಳ್ಳಗೆರೆಯ ಸಣ್ಣ ತಮ್ಮಪ್ಪ ಬಾರ್ಕಿ, ಹೋರಾಟಗಾರರಾದ ಸಿರಿಗೆರೆ ತಿಪ್ಪೇಶ್, ಬಸವರಾಜ್ ನಾಯಕ, ಚಿತ್ರದುರ್ಗದ ಶ್ರೀನಿವಾಸ್ ನಾಯಕ ಮತ್ತಿತರರು ನಿಯೋಗದಲ್ಲಿದ್ದರು.

# ಆರೋಗ್ಯ ಇಲಾಖೆಯಲ್ಲಿ ವರ್ಗಾವಣೆಗೆ ಕೌನ್ಸಿಲಿಂಗ್

ಬೆಂಗಳೂರು, ಅ. 18 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ ಇನ್ನು ಮುಂದೆ ಕೌನ್ಸಿಲಿಂಗ್ ಮೂಲಕ ನಡೆಯಲಿದೆ.

ಇಲಾಖೆಯಲ್ಲಿ ಅನಿಯಮಿತ ವರ್ಗಾವಣೆಗೆ ತಡೆ ಹಾಕಿ, ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಶಿಸ್ತು, ಪಾರದರ್ಶಕತೆ ಹಾಗೂ ದಕ್ಷತೆ ತರಲಾಗಿದೆ. ಇದರಿಂದಾಗಿ ಇನ್ನು ಮುಂದೆ ಸಾರ್ವಜನಿಕರಿಗೆ ಯಾವುದೇ ಅಡ್ಡಿ ಇಲ್ಲದೆ ಸಮರ್ಪಕ ಆರೋಗ್ಯ ಸೇವೆ ಲಭ್ಯವಾಗಲಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.


## ಬಾಪೂಜಿ ವಿದ್ಯಾಸಂಸ್ಥೆ

ಪಿ.ಜೆ.ಬಡಾವಣೆ, ದಾವಣಗೆರೆ-577002
ದೂರವಾಣಿ : (08192) 251302, 250659, 230235, ಫ್ಯಾಕ್ಸ್ : 91-8192-231201

### ಹರಾಜು ನೋಟಿಸ್

ಬಾಪೂಜಿ ವಿದ್ಯಾ ಸಂಸ್ಥೆಯ ಬಿ.ಐ.ಇ.ಟಿ ಕಾಲೇಜಿನ ಪ್ರಾಂಶುಪಾಲರ ಹೆಸರಿನಲ್ಲಿ ಸುಸ್ಥಿತಿಯಲ್ಲಿರುವ ನೊಂದಾವಣೆ ಸಂಖ್ಯೆ KA-17 M 9982 (Ford-Fiesta) ನೊಂದಾವಣೆ ವರ್ಷ 2009 ಹಾಗೂ ಬಾಪೂಜಿ ವಿದ್ಯಾಸಂಸ್ಥೆ ಹೆಸರಿನಲ್ಲಿರುವ ವಾಹನ ಸಂಖ್ಯೆ KA-17 M 7379 Innova Car ನೊಂದಾವಣೆ ವರ್ಷ 2007 ಈ ವಾಹನಗಳನ್ನು, ಹರಾಜು ಮೂಲಕ ಕೆಳಕಂಡ ನಿಬಂಧನೆಗೊಳಪಟ್ಟು ದಿನಾಂಕ : 21.08.2021 ಶನಿವಾರ ಸಂಜೆ 5:30 ಕ್ಕೆ ಬಿ.ಐ.ಇ.ಟಿ ಕಾಲೇಜಿನ ಆವರಣದಲ್ಲಿ ಮಾರಾಟ ಮಾಡಲಾಗುವುದು. ವಾಹನವನ್ನು ಅದೇ ದಿನಾಂಕ ಬೆಳಗ್ಗೆ 10.00 ಗಂಟೆಯಿಂದ ಬಿ.ಐ.ಇ.ಟಿ ಕಾಲೇಜಿನ (ಆಡಳಿತ ಕಛೇರಿ) ಆವರಣದಲ್ಲಿ ನೋಡಬಹುದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಬಿ.ಐ.ಇ.ಟಿ ಕಾಲೇಜಿನ ಆಡಳಿತ ಕಛೇರಿಯಲ್ಲಿ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಪಡೆಯಬಹುದಾಗಿದೆ.

**ಹರಾಜಿನಲ್ಲಿ ಭಾಗವಹಿಸುವವರು ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತಾರೆ**

1) ಹರಾಜಿನಲ್ಲಿ ಭಾಗವಹಿಸುವವರು ರೂ.10,000/- (ಹತ್ತು ಸಾವಿರ ರೂಪಾಯಿ) ಗಳನ್ನು ನಗದಾಗಿ ಹರಾಜಿಗೆ ಮುನ್ನ ಠೇವಣಿ ಇಟ್ಟು ರಸೀದಿ ಪಡೆದವರಾಗಿರಬೇಕು. 2) ಹರಾಜು ಯಾರಿಗೆ ನಿಲ್ಲುತ್ತದೆಯೋ ಅವರು ಕೊಳ್ಳಲು ಒಪ್ಪಿದ ಮೊಬಲಗಿನ ಶೇಕಡಾ 25% ಭಾಗದ ಹಣವನ್ನು ಹರಾಜು ಮುಗಿದ ತಕ್ಷಣ ಕೊಡತಕ್ಕದ್ದು ಹಾಗೆ ಮಾಡದಿದ್ದಲ್ಲಿ ಹರಾಜನ್ನು ರದ್ದುಗೊಳಿಸಲಾಗುತ್ತದೆ. ಮತ್ತು ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 3) ಶೇಕಡಾ 25% ಭಾಗವನ್ನು ಕಟ್ಟಿದ ನಂತರ, ಕೊಳ್ಳಲು ಒಪ್ಪಿದವರು ಉಳಿದ ಹಣವನ್ನು ಒಂದು ವಾರದೊಳಗೆ ಪಾವತಿ ಮಾಡಿ ಸಂಬಂಧಿಸಿದ ವಾಹನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದು. 4) ಹಾಗೆ ಒಂದು ವಾರದಲ್ಲಿ ಉಳಿದ ಹಣವನ್ನು ಸಂಸ್ಥೆಗೆ ಕಟ್ಟಲು ತಪ್ಪಿದ್ದಲ್ಲಿ, ಈ ವಿಷಯದ ಬಗ್ಗೆ ಯಾವ ನೋಟೀಸ್ ಕೊಡದೆ, ಕಟ್ಟಿದ ಎಲ್ಲಾ ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 5) ನಿಯಮಾನುಸಾರ ವಾಹನವನ್ನು ಸ್ವಾಧೀನಕ್ಕೆ ತೆಗೆದುಕೊಂಡವರು ಆ ವಾಹನಕ್ಕೆ ಸಂಬಂಧಪಟ್ಟಂತೆ ನೋಂದಣಿ ಪತ್ರ ಹಾಗೂ ದಾಖಲಾತಿಗಳನ್ನು ಅವರ ಹೆಸರಿಗೆ ಕೂಡಲೇ ವರ್ಗಾಯಿಸತಕ್ಕದ್ದು. 6) ಸವಾಲುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು, ಕೆಳ ಸಹಿದಾರರು ಕಾದಿರಿಸಿಕೊಂಡಿರುತ್ತಾರೆ. ಈ ವಿಷಯದ ಬಗ್ಗೆ ಯಾವುದೇ ತಕರಾರುಗಳನ್ನು ಅಂಗೀಕರಿಸುವುದಿಲ್ಲ.

ಸಹಿ/- ಡಾ.ಶಾಮನೂರು ಶಿವಶಂಕರಪ್ಪ
ಗೌರವ ಕಾರ್ಯದರ್ಶಿಗಳು


# ಐಎನ್ಐ-ಸಿಇಟಿಯಲ್ಲಿ ಡಾ. ಮೇಘನಾಗೆ 76ನೇ ರ್‍ಯಾಂಕ್



ದಾವಣಗೆರೆ, ಆ.17- ಐಎನ್ಐ - ಸಿಇಟಿ ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆಯಲ್ಲಿ 76ನೇ ರ್‍ಯಾಂಕ್ ಪಡೆಯುವುದರ ಮೂಲಕ, ದೇಶದ ಪ್ರತಿಷ್ಠಿತ ವೈದ್ಯಕೀಯ ಸಂಶೋಧನಾ ಸಂಸ್ಥೆ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ನವದೆಹಲಿಯ ಏಮ್ಸ್-ಎಐಐಎಂಎಸ್) ನಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪ್ರವೇಶ ಪಡೆಯಲು ನಗರದ ಡಾ. ಕೆ.ಬಿ. ಮೇಘನಾ ಅವರು ಆಯ್ಕೆಯಾಗಿದ್ದಾರೆ.

ವೈದ್ಯಕೀಯ ಪದವಿಯನ್ನು ಸ್ಥಳೀಯ ಜಜಮು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪಡೆದಿರುವ ಮೇಘನಾ, ಆಡಿಟರ್ ಈಚಘಟ್ಟದ ಕೆ. ಬಸವರಾಜಪ್ಪ ಹಾಗೂ ಶ್ರೀಮತಿ ಅಂಬಿಕಾ ದಂಪತಿ ಪುತ್ರಿ.

# ಆರ್.ಜಿ. ವಿದ್ಯಾಸಂಸ್ಥೆಯ ನೂತನ ಕಟ್ಟಡದ ಉದ್ಘಾಟನೆ



ದಾವಣಗೆರೆ, ಆ.18- ಸ್ಥಳೀಯ ಆರ್.ಜಿ. ವಿದ್ಯಾಸಂಸ್ಥೆಯ ಕಾಲೇಜು ಕಟ್ಟಡವನ್ನು ಸಿದ್ದವೀರಪ್ಪ ಬಡಾವಣೆಯ ಬಿಐಇಟಿ ಕಾಲೇಜು ರಸ್ತೆಯಲ್ಲಿ ಆರಂಭಿಸಲಾಗಿದ್ದು, ಸರಳ ಪೂಜಾ ಕಾರ್ಯಕ್ರಮದೊಂದಿಗೆ ನಿನ್ನೆ ಕಾರ್ಯಾರಂಭ ಮಾಡಿತು.

ಆರ್.ಜಿ.ಕಾಲೇಜು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ವೇತಾ ಆರ್.ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಹರಿಹರದ ಮಾಜಿ ಶಾಸಕ ಎಸ್.ಎಚ್. ಶಿವಶಂಕರ್ ಅವರು ನೂತನ ಕಾಲೇಜು ಕಟ್ಟಡವನ್ನು ಟೇಪು ಕತ್ತರಿಸುವುದರ ಮೂಲಕ ಉದ್ಘಾಟಿಸಿದರು. ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಎಸ್. ಹೆಚ್.ಅನಿತಾ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಸ್ಥಳೀಯ ಗಣ್ಯರಾದ ಜಯಚಂದ್ ಪಿ. ಜೈನ್, ಸುದರ್ಶನ್ ಜೈನ್, ಅಜಿತ್ ಓಸ್ವಾಲ್, ರಕ್ಷಕ್ ರಾಯ್ಕರ್, ಸುನಿಲ್‌ಕುಮಾರ್, ಕು. ಜಿ.ಕೆ. ಗೀತಾ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಶುಭ ಹಾರೈಸಿದರು.

ಆರ್.ಜಿ. ಪದವಿ ಕಾಲೇಜಿನ ಪ್ರಾಂಶುಪಾಲ ಎಂ. ಎಸ್ ವಿಜಯ್, ಉಪ ಪ್ರಾಂಶುಪಾಲ ಸಲಿಂ ಮಲಿಕ್, ಸಂಸ್ಥೆಯ ಸಿಬ್ಬಂದಿಗಳಾದ ಶ್ರೀಮತಿ ಸ್ನೇಹ, ಶ್ರೀಮತಿ ಬಿ.ಟಿ ರಶ್ಮಿ, ಎಲ್.ಎಂ ಶರಣಕುಮಾರ್ ಮತ್ತಿತರರು ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಸ್ವಾಗತಿಸಿ, ಬೀಳ್ಕೊಟ್ಟರು.



## ಹರಿಹರದ ಪಂಚಮಸಾಲಿ ಪೀಠದ ಜಗದ್ಗುರುಗಳಿಂದ ಭದ್ರೆಗೆ ಬಾಗಿನ

ಹರಿಹರ, ಆ. 18- ಇಲ್ಲಿನ ವೀರಶೈವ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ತುಂಗಭದ್ರಾ ನದಿಗೆ ಬಾಗಿನ ಅರ್ಪಿಸಲಾಯಿತು. ದಾವಣಗೆರೆಯಿಂದ 2, ಹರಪನಹಳ್ಳಿಯಿಂದ 2 ಹಾಗೂ ರಾಣೇಬೆನ್ನೂರಿನಿಂದ ಒಂದು ಸೇರಿ ಐದು ಬಾಗಿನಗಳನ್ನು ಮಾಡಿ, ಒಂದನ್ನು ನದಿಗೆ ಸಮರ್ಪಿಸಿ ಉಳಿದ ನಾಲ್ಕು ಬಾಗಿನವನ್ನು ಸಮಾಜದ ಮುತ್ತೈದೆಯರಿಗೆ ನೀಡಲಾಯಿತು.

# ಸಕ್ರಿಯ ಸೋಂಕಿತರ ಸಂಖ್ಯೆ 148 ದಿನಗಳಲ್ಲೇ ಕಡಿಮೆ

ನವದೆಹಲಿ, ಆ. 18 - ದೇಶದಲ್ಲಿ ಬುಧವಾರ 35,178 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 440 ಜನರು ಸಾವನ್ನಪ್ಪಿದ್ದಾರೆ.

ಸಕ್ರಿಯ ಸೋಂಕಿತರ ಸಂಖ್ಯೆ 3.67 ಲಕ್ಷಕ್ಕೆ ಇಳಿಕೆಯಾಗಿದ್ದು, ಇದು 148 ದಿನಗಳಲ್ಲೇ ಅತಿ ಕಡಿಮೆಯಾಗಿದೆ. ಕಳೆದ 52 ದಿನಗಳಿಂದ ದೈನಂದಿನ ಸೋಂಕಿತರ ಸಂಖ್ಯೆ 50 ಸಾವಿರಕ್ಕೂ ಕಡಿಮೆ ಇದೆ.

ಕಳೆದ 24 ಗಂಟೆಗಳಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,431 ಕಡಿಮೆಯಾಗಿದೆ. ಕೊರೊನಾ ಟೆಸ್ಟ್‌ನಲ್ಲಿ ಸೋಂಕಿತರು ಕಂಡುಬರುವ ಪ್ರಮಾಣ ಶೇ.1.96ರಷ್ಟಿದೆ. ಕಳೆದ 23 ದಿನಗಳಲ್ಲಿ ಸೋಂಕಿತರು ಕಂಡು ಬರುವ ಪ್ರಮಾಣ ಶೇ.3ಕ್ಕಿಂತ ಕಡಿಮೆ ಇದೆ.

ಇದುವರೆಗೂ ದೇಶದ 56.06 ಕೋಟಿ ಜನರಿಗೆ ಕೊರೊನಾ ಲಸಿಕೆ ನೀಡಲಾಗಿದೆ.

ರಕ್ತದಾನ, ಶ್ರೇಷ್ಠದಾನ

# ಎನ್‌ಡಿಎ ಪರೀಕ್ಷೆಯಲ್ಲಿ ಮಹಿಳೆಯರು ಪಾಲ್ಗೊಳ್ಳಲು ಅನುಮತಿ

ನವದೆಹಲಿ, ಆ. 18 – ಬರುವ ಸೆಪ್ಟೆಂಬರ್ 5ರಂದು ನಡೆಯಲಿರುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್.ಡಿ.ಎ.) ಪರೀಕ್ಷೆಯಲ್ಲಿ ಮಹಿಳೆಯರು ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಹೃಶಿಕೇಶ್ ರಾಯ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಮಧ್ಯಂತರ ಆದೇಶ ಹೊರಡಿಸಿದೆ. ಕುಶ್ ಕಲ್ರ ಎಂಬುವವರು ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಮಹಿಳೆಯರು ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದೆ. ಆದರೆ, ಈ ಅನುಮತಿ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿದೆ.

# ಕೊರೊನಾ ಹರಡುವ ವೇಗ ಇಳಿಕೆ

ನವದೆಹಲಿ, ಆ. 18 – ಕೊರೊನಾ ಹರಡುವ ವೇಗವನ್ನು ಸೂಚಿಸುವ ಆರ್ ಮೌಲ್ಯ ಕೇರಳ ಹಾಗೂ ಈಶಾನ್ಯ ಪ್ರದೇಶ ಸೇರಿದಂತೆ ದೇಶಾದ್ಯಂತ ಇಳಿಕೆಯಾಗಿದೆ. ಆಗಸ್ಟ್ 14-16ರ ಅವಧಿಯಲ್ಲಿ ಆರ್ ಮೌಲ್ಯ 0.89ರಷ್ಟಿತ್ತು. ಆರ್ ಮೌಲ್ಯ ಕಡಿಮೆಯಿದ್ದರೆ ಹೊಸದಾಗಿ ಕೊರೊನಾ ಸೋಂಕಿಗೆ ಗುರಿಯಾಗುವವರ ಸಂಖ್ಯೆ ಕಡಿಮೆಯಾಗುತ್ತದೆ.

ಕೇರಳದಲ್ಲಿ ಆರ್ ಮೌಲ್ಯ 1ಕ್ಕಿಂತ ಕಡಿಮೆ ಇದೆ ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸ್‌ನ ಸಿತ್ಬರ ಸಿನ್ಹ ಹೇಳಿದ್ದಾರೆ.


## ಹೃತ್ಪೂರ್ವಕ ಅಭಿನಂದನೆಗಳು



ದಾವಣಗೆರೆ ಲೋಕಲ್ ಮತ್ತು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷರಾಗಿ
**ಎಂ. ದಾದಾಪೀರ್**
ಅವರು ಮರು ಆಯ್ಕೆ ಆಗಿದ್ದಾರೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು

**ಶುಭ ಕೋರುವವರು**

- ಎಸ್.ಎನ್.ಟಿ ಸಾಧಿಕ್ (ಶಾನ್ ಟ್ರಾನ್ಸ್ ಪೋರ್ಟ್) ಶುಗರ್ ಕೇನ್ ಕಂಟ್ರ್ಯಾಕ್ಟರ್
- ದಾವಣಗೆರೆ ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟ್ ಸಂಘ


# ನಗರದಲ್ಲಿ ಇಂದು ಲಸಿಕೆ

ವಿಶ್ವ ಮಧ್ವ ಮಹಾ ಪರಿಷತ್ತು ಕೇಂದ್ರ ವತಿಯಿಂದ ಪ್ರಥಮ - ದ್ವಿತೀಯ ಡೋಸ್ ಕೋವಿಶೀಲ್ಡ್ ಲಸಿಕೆ ಯನ್ನು ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಇಂದು ಬೆಳಿಗ್ಗೆ 10.30 ರಿಂದ ನಡೆಯಲಿದೆ.

ವಿವರಕ್ಕೆ ಸಂಪರ್ಕಿಸಿ: ಶ್ಯಾಂ (9480325428), ಶಾಂತೇಶ್ ಗುತ್ತಲ್ (9448530330), ರಾಜಣ್ಣ (9900153953).

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಆರ್‌ಟಿಓ ಆಫೀಸ್, ಬೂದಿ ಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ಸಾಧನೆಗೆ ಅಭಿನಂದನೆಗಳು



ನಮ್ಮೆಲ್ಲರ ಆತ್ಮೀಯ ಮಿತ್ರರಾದ ಶ್ರೀ ಆಡಿಟರ್ ಬಸವರಾಜ್, ಈಚಘಟ್ಟ ಶ್ರೀಮತಿ ಅಂಬಿಕಾ ಇವರ ಸುಪುತ್ರಿ

**ಡಾ.ಮೇಘನ ಕೆ.ಬಿ.**

ಇವರು ಪ್ರತಿಷ್ಠಿತ ವೈದ್ಯಕೀಯ ಸಂಶೋಧನಾ ಸಂಸ್ಥೆಯಾದ ದೆಹಲಿಯ ಏಮ್ಸ್ ನ (AIIMS, New Delhi) ಸ್ನಾತಕೋತ್ತರ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ. ಇವರ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸುತ್ತಾ, ಇವರ ಸಾಧನೆಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

- ಸದಾನಂದ ಸ್ವಾಮಿ ಎಸ್.ಮಠದ್, ವಿನಾಯಕ ಪೇಂಟ್ಸ್
- ಸುನಿಲ್ ಕುಮಾರ್ ಬಿ.ಜೆ.
- ಮಾಲತೇಶ್ ಎಂ.ಆರ್. (ಮಾಲಿ)
- ತಿಪ್ಪೇಶ್ ಜಿ.ವಿ. ಸಿಟಿ ಎಲೆಕ್ಟ್ರಾನಿಕ್ಸ್
- ವಿಜಯ್ ಕುಮಾರ್, ಟ್ರಾನ್ಸ್‌ಪೋರ್ಟ್
- ರಾಜಾಸಾಬ್ ವೈ.ಎನ್., ಚಲನಚಿತ್ರ ವಿತರಕರು ಮತ್ತು ನಟರು
- ಸತೀಶ್ ಚಂದ್ರ, ಟ್ರಾನ್ಸ್‌ಪೋರ್ಟ್
- ದೊಡ್ಡ ಬಸಪ್ಪ, ಆಟೋ ಗ್ಯಾರೇಜ್
- ಪ್ರಭು, ಕ್ಯೂ ಸ್ಪೋರ್ಟ್ಸ್
- ಆನಂದ್, ಶ್ರೀ ಗಂಧ ಗಿಫ್ಟ್ಸ್
- ಹರೀಶ್







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte